ಕಲ್ಯಾಣ ಕಿರಣ

ಡಿಸೆಂಬರ್–2017

ಬೆಲೆ–20 ರೂ.






ಲಿಂಗಾಯತ ಧರ್ಮ ಮಹಾಸಭಾದ 22ನೆಯ ವಾರ್ಷಿಕೋತ್ಸವದ ಉದ್ಘಾಟನೆ

ಲಿಂಗಾಯತ ಸಮಾವೇಶದ ಸಿಹಿ ಕ್ಷಣಗಳು





ಲಿಂಗಾಯತ ಧರ್ಮ ಮಹಾಸಭಾದ 22ನೆಯ ವಾರ್ಷಿಕೋತ್ಸವದ ಸಮಾವೇಶ

" ಲಿಂಗಾಯತ ನಾನು ಲಿಂಗಾಯತ "

ಲಿಂಗಾಯತ ನಾನು ಲಿಂಗಾಯತ
ವಿಶ್ವಬಂಧುವು ನಾನು ವಿಶ್ವ ಬಂಧುವು ॥ಪ॥

ನನ್ನ ಧರ್ಮ ಲಿಂಗಾಯತ ಎಂದು ಸಾರಿ ನುಡಿವೆನು
ಬಸವಣ್ಣನೇ ಧರ್ಮಗುರುವು ಎಂದು ನಂಬಿ ನಡೆವೆನು
ಲಿಂಗದೇವ ಜಗದ ಕರ್ತ ಎಂಬ ಶ್ರದ್ದೆ ಹೊಂದುತ
ವಚನ ಶಾಸ್ತ್ರ ನಮ್ಮ ನಡೆಗೆ ಧರ್ಮ ಸೂತ್ರವೆಂಬೆನು ॥ 1 ॥

ಇಷ್ಟಲಿಂಗ ದೇವಕುರುಹು ಎಂದು ನಾನು ಧರಿಪೆನು
ಸಂಗಮವು ಧರ್ಮಕ್ಷೇತ್ರ ಎಂದು ತಿಳಿದು ಬರುವೆನು
ಶರಣ ಮೇಳದಲ್ಲಿ ಕೂಡಿ ಹಾಡಿ ಪಾಡಿ ನಲಿವೆನು
ಕಲ್ಯಾಣಪರ್ವಕೆ ಬಂದು ಜನ್ಮಧನ್ಯಗೈವೆನು ॥ 2 ॥

ಷಟ್‌ಕೋನ ಬಸವ ಧ್ವಜವ ಹಿಗ್ಗಿನಿಂದ ಹಾರಿಪೆನು
ಇಷ್ಟಲಿಂಗ ದೀಕ್ಷೆ ಹೊಂದಿ ಗಣಪದವಿಯ ಹೊಂದುವೆನು
ಭಕ್ತಿ ಪಕ್ಷ ಹೊಂದಲಿಕ್ಕೆ ಬಸವ ಮಂಟಪ ಕಟ್ಟುವೆನು
ವಾರಕ್ಕೊಮ್ಮೆ ಸಾಮೂಹಿಕ ಪ್ರಾರ್ಥನೆಯ ಗೈವೆನು ॥ 3 ॥

ಶ್ರಾವಣ ಮಾಸದಲ್ಲಿ ನಾನು ವಚನ ಪಠಣ ಗೈವೆನು
ಶರಣ ಭಾಷೆ ಕನ್ನಡವೆಂದು ಹೆಮ್ಮೆಯಿಂದ ನುಡಿವೆನು
ಬಸವಾದಿ ಶರಣರ ಪರಂಪರೆಯು ನನ್ನದು
ಜಾತಿ ವರ್ಣ ವರ್ಗಾತೀತ ಸಹೋದರತೆ ನಮ್ಮದು ॥ 4 ॥

ಮರ್ತ್ಯಲೋಕ ಕರ್ತಾರನ ಕಮ್ಮಟವೆಂದೆನ್ನುತ
ದಿವ್ಯ ಗಣಲಿಂಗವು ಬೆಸವ ಕುರುಹು ಎಂಬೆನು
ಜಾತಿ ಸೂತ್ರ ತೊರೆದು ನಾನು ನೀತಿ ಸೂತ್ರ ಹಿಡಿವೆನು
ಧರ್ಮಸೋದರತ್ವ ಸಾರಿ ಶರಣ ಸಮಾಜ ಕಟ್ಟುವೆನು ॥ 5 ॥

– ಮಾತಾಜಿ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ಸಂಪುಟ-49 ಬಸವ ಶಕೆ -884 ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-12 ಡಿಸೆಂಬರ್- 2017 ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಲೇಖನಗಳು	ಲೇಖಕರು	ಪುಟ

ಶರಣ ವ್ರತ ಸ್ವೀಕಾರ

ಶರಣ ಬಂಧುಗಳೇ,

ಶರಣ ವ್ರತ ಸ್ವೀಕಾರ ಮಾಡಿ ಶರಣ ಮೇಳಕ್ಕೆ ಅನೇಕರು ಬರುವುದುಂಟು. 40 ದಿವಸಗಳ ಗುರುಸಾರಾಯ ಸಂಪದ್ ವ್ರತ, 30 ದಿನಗಳ ಲಿಂಗ ಸಾರಾಯ ಸಂಪದ್ ವ್ರತ, 20 ದಿವಸಗಳ ಜಂಗಮ ಸಾರಾಯ ಸಂಪದ್ ವ್ರತ, 10 ದಿವಸಗಳ ಪ್ರಸಾದ ಸಾರಾಯ ಸಂಪದ್ ವ್ರತ. ಇವುಗಳಲ್ಲಿ ಯಾವುದನ್ನಾದರೂ ಸ್ವೀಕರಿಸಿ ದಿ. 14-01-2018ರಂದು ವ್ರತವನ್ನು ಪೂರ್ಣ ಗೊಳಿಸಬೇಕು.

1. ಗುರು ಸಾರಾಯ ಸಂಪದ್ ವ್ರತ - ಡಿಸೆಂಬರ್ 2ರಂದು
2. ಲಿಂಗ ಸಾರಾಯ ಸಂಪದ್ ವ್ರತ - ಡಿಸೆಂಬರ್ 12ರಂದು
3. ಜಂಗಮ ಸಾರಾಯ ಸಂಪದ್ ವ್ರತ - ಡಿಸೆಂಬರ್ 22ರಂದು
4. ಪ್ರಸಾದ ಸಾರಾಯ ಸಂಪದ್ ವ್ರತ - ಜನವರಿ 1ರಂದು

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, Basava Mantapa Road, 2nd Block, Rajajinagar, Bengaluru-560010. Phone : 080-23131476, Send SMS to 9945806297 Email-kalyana.kirana1134@gmail.com

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ

ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ

ಮೂವತ್ತೊಂದನೆಯ ಶರಣ ಮೇಳ

2018ರ ಜನವರಿ 11, 12, 13 ಮತ್ತು 14 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಮೂವತ್ತೊಂದನೆಯ ಶರಣ ಮೇಳವು 2018ರ ಜನವರಿ 11, 12, 13 ಮತ್ತು 14ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. 4 ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 14ನೆಯ ದಿನಾಂಕದ ರಾತ್ರಿವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 10,000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು :3000 ರೂ.
2. ಪೋಷಕರು : 8000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 1500 ರೂ.
3. ದಾನಿಗಳು: 5000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 500 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 10,000/20,000 ರೂಪಾಯಿಗಳ ಪುದುವಟ್ಟು (F.D)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of India, Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ. ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧ ಗಯೆ ಧರ್ಮ ಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೂಡಲ ಸಂಗಮ, ಬ್ಯಾಂಕ್ ಖಾತೆಗಳು

Sharana Mela Utsava Samithi, SB A/c 10818354899
Basava Dharma Peetha, SB A/c No. 10818354684
Basava Mahamane Charitable Trust SB A/c 32391821105

Sharana Mela Utsava Samithi, (Canara Bank, Bangalore) SB A/c 1145101024057 ಕಾಣಿಕೆ ಕಳಿಸುವವರು ನೇರವಾಗಿ ವರ್ಗಾಯಿಸಿದರೆ ಕಾರ್ಯಾಲಯಕ್ಕೆ ತಿಳಿಸಬೇಕು. 80ಜಿ ಇನ್‌ಕಮ್‌ಟ್ಯಾಕ್ಸ್ ರಿಯಾಯಿತಿ ಬೇಕೆನ್ನುವವರು ಕಾರ್ಯಾಲಯಕ್ಕೆ ಸಂಪರ್ಕಿಸಿ.

ಸಂಪರ್ಕಿಸುವ ವಿಳಾಸಗಳು

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟೆ
ದೂ : 9448046554/9880768555

ಹಿಂದೂ ಧರ್ಮ - ಹಿಂದೂಗಳ ಕುರಿತು ಬಾಬಾ ಅಂಬೇಡ್ಕರ್ ಅವರ ನೇರ ನುಡಿಗಳು

- ಸಂಗ್ರಹ

(ಮುಂದುವರಿದ ಭಾಗ)

ಕುಡಿಯಲು ನೀರು ಕೊಡದ, ಕೊನೆ ಪಕ್ಷ ದೇವರನ್ನು ನೋಡಲು ಬಿಡದ ಧರ್ಮ - ಧರ್ಮವೇ ಅಲ್ಲ, ಅದು ಪಾಪದ ಕೊಚ್ಚೆಯ ರಾಶಿ. ಅಂತಹುದನ್ನು ಧರ್ಮ ಎಂದು ಕರೆಯಬಾರದು. ನೀವು ವಿದ್ಯಾವಂತರಾಗುವುದನ್ನು ನಿಷೇಧಿಸಿದೆ. ನಿಮ್ಮ ಭೌತಿಕ ಸುಖಗಳನ್ನೆಲ್ಲಾ ಸರ್ವನಾಶ ಮಾಡಿದ ಧರ್ಮದಲ್ಲಿ ನೀವು ಒಂದು ಕ್ಷಣ ಕೂಡಾ ಇರಬಾರದು. ಮಾನವರ ಬಗ್ಗೆ ಪ್ರೇಮ, ಕನಿಕರ ತೋರಿಸದ ಧರ್ಮ ಧರ್ಮವೇ ಅಲ್ಲ. ಪ್ರಾಣಿಗಳನ್ನು ಕೊಂದರೆ ಪಾಪ ಎಂದು ತನ್ನ ಅನುಯಾಯಿಗಳಿಗೆ ತಿಳಿಸುತ್ತಾ, ಸಮಾನ ಮನದವರನ್ನು ಕ್ರೂರವಾಗಿ ಹಿಂಸಿಸುವುದನ್ನು ನಿಜವಾಗಿಯೂ ಧರ್ಮ ಎನ್ನಬೇಕೆ? ಕೂಡದು. ಇದು ಬರೀ ಮೋಸ - ವಂಚನೆ.

ಜಾತೀಯತೆ ಭದ್ರವಾಗಿ ಬೇರೂರಿರುವ ಮಾನಸಿಕ ಪ್ರವೃತ್ತಿ ಅದು ಬುಡಸಹಿತ ನಾಶವಾಗಬೇಕಾದ್ದಲ್ಲಿ ಮಾನಸಿಕವಾದ ವಿಪ್ಲವ ಬರಬೇಕು. ಹಿಂದೂಗಳು ಜಾತೀಯತೆ ಆಚರಿಸುವಲ್ಲಿ ಅಮಾಯಕರೂ ಹೌದು. ಅಮಾನುಷರೂ ಹೌದು. ಅವರು ಜಾತೀಯತೆಯನ್ನು ಅಷ್ಟು ಕಟ್ಟುನಿಟ್ಟಾಗಿ, ಕ್ರೂರವಾಗಿ ಆಚರಿಸುವುದಕ್ಕಿಂತ ಅವರಿಗೆ ಧರ್ಮದ ಬಗ್ಗೆ ಇರುವ ವ್ಯಾಮೋಹವೇ ಕಾರಣ. ಹಿಂದೂಗಳು ಜಾತೀಯತೆ ಆಚರಿಸುವಲ್ಲಿ ತಪ್ಪಿಲ್ಲ. ಜಾತಿಭಾವನೆ ಜನ್ಮಕ್ಕೆ ಅಂಟಿಸಿರುವ ಧರ್ಮದ್ದು ತಪ್ಪು. ಧಾರ್ಮಿಕ ತತ್ವವೆಂದು ಜಾತೀಯತೆ ಬೋಧಿಸುತ್ತಿರುವ ಶಾಸ್ತ್ರಗಳೇ ನಮಗೆ ನಿಜವಾದ ಶತೃಗಳು. ಜಾತೀಯತೆಯ ತತ್ವವನ್ನು ಬೋಧಿಸುವ ಶಾಸ್ತ್ರಗಳನ್ನು, ಗ್ರಂಥಗಳನ್ನು ಸುಟ್ಟು ಭಸ್ಮಮಾಡಿ. ಪುರಾಣಗಳಲ್ಲಿ, ವೇದಗಳಲ್ಲಿ, ಶಾಸ್ತ್ರಗಳಲ್ಲಿ ಪವಿತ್ರವಾದುದೆಂದು ಹೇಳುತ್ತಿರುವ ಅಪವಿತ್ರತೆಯನ್ನು ಧ್ವಂಸಮಾಡಿ, ಈ ಶಾಸ್ತ್ರಗಳ ಉಕ್ಕಿನ ಸಂಕೋಲೆಗಳಿಂದ ಪ್ರತಿ ಸ್ತ್ರೀ ಪುರುಷರು ವಿಮುಕ್ತಿ ಪಡೆಯಬೇಕು.

ನಾಲ್ಕು ವರ್ಣಗಳೇ ಜಾತಿಗಳಾಗಿ ಪರಿಣಮಿಸಿದೆ. ಜಾತಿ ವಿಭಜನೆ, ಕೇವಲ ಶ್ರಮ ವಿಭಜನೆಯೇ ಅಲ್ಲದೆ, ಶ್ರಮಿಕರಲ್ಲಿ ಭಿನ್ನತೆಗೆ ದಾರಿಮಾಡಿಕೊಟ್ಟು ಹಿಂದೂ ಸಮಾಜದ ಏಕತೆಯನ್ನು ಒಡೆದು ಚೂರು ಚೂರು ಮಾಡಿದೆ.

ಹಿಂದೂ ಧರ್ಮದಲ್ಲಿ 'ಧರ್ಮ' ಎನ್ನುವುದೇ ಇಲ್ಲ. ಅದು ಕೇವಲ ಪೂಜಾರಿಗಳು, ಧಾರ್ಮಿಕ ಮುಖಂಡರು ಭೋಜನಕ್ಕಾಗಿ, ಅಧ್ಯಾತ್ಮಿಕ ವ್ಯಾಪಾರ ಮಾಡುವುದಕ್ಕಾಗಿ ಲೈಸೆನ್ಸು ಪಡೆದ ಸಂಸ್ಥೆ ಮಾತ್ರ

ಕೆಲವು ಮಂದಿ ಸಮಾಜಕ್ಕೆ 'ಧರ್ಮ' ಅಗತ್ಯ ಎನ್ನುತ್ತಾರೆ. ಆದರೆ ಅದು ಸರಿಯಾದ ಅಭಿಪ್ರಾಯವಲ್ಲ. ಸಮಾಜದ ಸದ್ವರ್ತನೆಗೆ, ನೈತಿಕ ಜೀವನ ವಿಧಾನಕ್ಕೆ ಧರ್ಮಕ್ಕೆ ಸಂಬಂಧಿಸಿದ ಬುನಾದಿಯೇನೋ ಅಗತ್ಯ. ಮನುಸ್ಮೃತಿ ಹೇಳಿರುವ ಸಾಮಾಜಿಕ 'ಧರ್ಮ' ಹಿಂದೂ ಸಮಾಜಕ್ಕೆ ಅಂಗೀಕಾರಾರ್ಹವಾದದ್ದು. ಪ್ರಾಮಾಣಿಕವಾಗಿದ್ದು ಅದರ ಆಧಾರದ ಮೇಲೆ ಸಮಾಜ ಬೆಳೆದು ಬಂದು ನಿಂತಿದೆ. ಅದರಿಂದ ಅಂತಹ ಅಸಮಾನತೆಗಳನ್ನು ಸಮೂಲವಾಗಿ ತೊಲಗಿಸಲು 'ಸ್ಮೃತಿ'ಯಲ್ಲಿ ಹೇಳಿರುವ ಧಾರ್ಮಿಕ ವಿಚಾರಗಳನ್ನು ಬುಡಸಹಿತ ಕಿತ್ತೆಸೆಯಬೇಕು. ಅವುಗಳ ಸ್ಥಾನದಲ್ಲಿ ಉತ್ತಮವಾದ ಅಂಶಗಳನ್ನು ಸೇರಿಸಿದಾಗಲೇ ಹಿಂದೂ ಸಮಾಜ ಉದಾತ್ತವಾದ ಸೃಜನಾತ್ಮಕವಾದ, ಸತ್ಸಂಪ್ರದಾಯಗಳ ಸಮಾಜ ಆಗಬಲ್ಲುದು. ನಾನು ಬಹಿರಂಗವಾಗಿ ಮನಸ್ಮೃತಿಯನ್ನು ಸುಟ್ಟುದುದರ ಮುಖ್ಯ ಉದ್ದೇಶ – ಹಿಂದೂ ಶಾಸ್ತ್ರಗಳು ಉದ್ದೇಶಪೂರ್ವಕವಾಗಿ ಶ್ರಮಿಕ ಪ್ರಜೆಗಳಿಗೆ ಮಾಡಿದ ಅನ್ಯಾಯ, ವಂಚನೆಗಳಿಗೆ ಎಂತಹ ಕೆಲಸ ಮಾಡಿದರೂ ತಪ್ಪಲ್ಲ ಎಂದು ನಿರೂಪಿಸುವುದಕ್ಕೆ ಮಾತ್ರವೇ..!

ಮಾನವನಲ್ಲಿನ ಮಹೋನ್ನತವಾದ ಗುಣಗಳಿಗಿಂತ ತಾನು ಜನಿಸಿದ ಕುಲವೇ ಶ್ರೇಷ್ಠ ಎಂಬ ಧೋರಣೆ ನಮ್ಮ ಸಮಾಜದಲ್ಲಿ ಅಳಿಸಿ ಹೋಗದೇ ಇರುವವರೆಗೂ ಶಾಂತಿ ಸುಧಾರಣೆಗಳು ಶುಷ್ಕ ನಿನಾದಗಳು ಮಾತ್ರ. ಸಾಮಾಜಿಕ ಸುಧಾರಣೆ ಎಂದರೆ ಇಡೀ ಸಮಾಜದಲ್ಲಿನ ದುರಾಚಾರಗಳ ವಿರುದ್ಧವಾಗಿ, ಮೂಢನಂಬಿಕೆಗಳ ವಿರುದ್ಧವಾಗಿ ಕ್ರಾಂತಿ, ದುರುದೃಷ್ಟವಶಾತ್ ನಮ್ಮ ಸುಧಾರಕರೆಲ್ಲ ತಮ್ಮ ತಮ್ಮ ಜಾತಿಗಳ ಸುಧಾರಣೆಗೆ ಹೆಣಗಾಡಿದ ಸುಧಾರಕರಾಗಿ ಮಾತ್ರ ಚಲಾವಣೆಯಾದರು.

ಹಿಂದೂ ಧರ್ಮ ಧರ್ಮವಾಗಿ ಉಳಿದಿಲ್ಲ. ಆ ಧರ್ಮದಿಂದ ಆಚೆಗೆ ಹೋಗುವ ಅವಕಾಶವಿದೆಯೇ ಹೊರತು ಒಳಕ್ಕೆ ಬರುವುದಕ್ಕೆ ಮಾತ್ರ ಅವಕಾಶವಿಲ್ಲ. ಆದ್ದರಿಂದಲೇ ಅದು ಕ್ಷೀಣಿಸಿರುವುದು. ವರ್ಣಾಶ್ರಮ ಧರ್ಮ ಮತ್ತು ಅಸ್ಪೃಶ್ಯತೆ – ಪರಸ್ಪರ ಅವಲಂಬನೆಯ ಎರಡು ಅತೀತ ಶಕ್ತಿಗಳಾಗಿ ಹಿಂದೂ ಸಮಾಜದಲ್ಲಿ ಜೀರ್ಣಿಸಿಕೊಂಡು ಹೋಗಿವೆ. ಈ ಎರಡೂ ಶಕ್ತಿಗಳೂ ಒಂದೇ ಪೆಟ್ಟಿಗೆ ನಾಶವಾದಾಗ ಮಾತ್ರ ಸಮಾನತೆ ಸಾಧ್ಯವಾಗುತ್ತದೆ. ಗಾಂಧಿಯವರು ವರ್ಣಾಶ್ರಮ ಧರ್ಮ ಮತ್ತು ಸನಾತನ ಧರ್ಮಗಳನ್ನು ಬಯಸುತ್ತಿರುವವರು. ಅವು ಯಾವ ರೂಪದಲ್ಲಿಯೇ ಇರಲಿ ಅಸ್ಪೃಶ್ಯರಿಗೆ ಹಾನಿಕರ. ವರ್ಣಾಶ್ರಮ ಧರ್ಮವೇ ಜಾತಿ ವ್ಯವಸ್ಥೆಯನ್ನು ಸೃಷ್ಟಿಸಿದ್ದು ಎಂಬ ಐತಿಹಾಸಿಕ ಸತ್ಯವನ್ನು ನಿಮ್ಮ ವರ್ಗದವರು ಮರೆಯುವಂತಿಲ್ಲ.

ಗಾಂಧಿಯವರು ತಮ್ಮ ಹರಿಜನೋದ್ಧಾರ ಕಾರ್ಯವನ್ನು ಕೊನೆಯ ಉಸಿರು ಬಿಡುತ್ತಿದ್ದ ಹಿಂದೂ ಧರ್ಮವನ್ನು ಉಳಿಸಲೆಂದೇ, ಅದನ್ನು ರಕ್ಷಾಕವಚವಾಗಿ ಬಳಸಿದರೇ ಹೊರತು, ಸರ್ವಮಾನವ ಸಮಾನತೆಗಾಗಿ ಅಲ್ಲ. ನಿಮ್ಮ ವರ್ಗಗಳವರು ಸ್ವಶಕ್ತಿಯ ಮೇಲೆ ನಿಲ್ಲುವಂತಹ ಹಕ್ಕುಗಳ ಹೋರಾಟಕ್ಕೆ ವಿರುದ್ಧವಾಗಿ ಗಾಂಧಿಯವರು ಸತ್ಯಾಗ್ರಹ ಮಾಡಿದರೇ

ಹೊರತು ಅವರ ಪ್ರಗತಿ, ರಕ್ಷಣೆಗಾಗಿ ಸತ್ಯಾಗ್ರಹ ಮಾಡಲಿಲ್ಲ. ನಿಮ್ಮ ವರ್ಗದವರು ಮತ್ತೊಮ್ಮೆ ಮೋಸ ಹೋಗಬಾರದು.

ಹಿಂದೂ ಧರ್ಮದ ದೈವಗ್ರಂಥಗಳು, ದೇವತೆಗಳು ನಿಮ್ಮನ್ನು ಅನೇಕ ಹೆಸರುಗಳಿಂದ, ನೀಚವಾದ ಪದಜಾಲಗಳಿಂದ, ಮಾನವೀಯತೆಯನ್ನು, ಆತ್ಮಾಭಿಮಾನವನ್ನು ನಿಂದಿಸಿ ಅವಮಾನಿಸಿರುವುದನ್ನು ಮರೆಯಬೇಡಿ. ಅದನ್ನು ಉಗ್ರವಾಗಿ ಖಂಡಿಸಬೇಕು. ಆ ದಿಕ್ಕಿನಲ್ಲಿ ಇನ್ನು ನಿಮ್ಮ ಜೀವನ ಸಾಗಕೂಡದು.

ಹಿಂದೂಗಳು ನನ್ನನ್ನು ಶತ್ರುವಾಗಿ ಕಾಣುವುದು ಅವಿವೇಕ. ಅವರನ್ನು ಸದಾ ಪ್ರೀತಿಸುತ್ತಲೇ ಇರುವೆ. ಭಾರತೀಯ ತತ್ವಶಾಸ್ತ್ರವನ್ನು ಜೀರ್ಣಿಸಿಕೊಂಡಿರುವ ನಾನು ಅವರಲ್ಲಿರುವ ಕೊಳಕನ್ನು ಶುದ್ಧಿ ಮಾಡಿ, ಪರಿಶುದ್ಧವಾದ ಜನಾಂಗವನ್ನಾಗಿ ತಯಾರು ಮಾಡಲು ಅವರ ದುರಾಚಾರಗಳ ವಿರುದ್ಧ ಹೋರಾಟ ನಡೆಸಿರುವೆ. ನನ್ನನ್ನು ಅವರು ತಪ್ಪಾಗಿ ಅರ್ಥಮಾಡಿಕೊಂಡಿರುವರು. ಎಂದಿಗಾದರೂ ನನ್ನ ಮಾರ್ಗವೇ ಸರಿಯಾದುದು ಎಂದು ತಪ್ಪದೆ ತಿಳಿಯುವ ಕಾಲ ಬಂದೇಬರುತ್ತದೆ. ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಪಖ್ಯಾತಿಗೆ ಗುರಿಯಾಗಿರುವ ಅಸ್ಪೃಶ್ಯತೆಯನ್ನು ಹಿಂದೂ ಸಮಾಜದಿಂದ ಬುಡಸಹಿತ ಕಿತ್ತು ಹಾಕಿದಾಗಲೇ ಶಾಂತಿ, ಸಹಜೀವನ, ಐಕ್ಯತೆ ಕಾಣಬಹುದು.

ಗಾಂಧೀಜಿ ಸಿದ್ಧಾಂತಗಳು ಸಾಮಾನು ವ್ಯಕ್ತಿಗೆ ಶಾಪವಾದಂತಿದೆ. ಅವು ಆರ್ಥಿಕ ಸಮಾನತೆಯನ್ನು ಬೋಧಿಸುವುದಿಲ್ಲ. ಮುಖ್ಯವಾಗಿ ಅವು ನಿಮ್ಮ ವರ್ಗದವರಿಗೆ ಹಾನಿಕರ. ಹಿಂದೂಗಳು ಎಲ್ಲಿಯವರೆಗೆ ಈ ಕಲುಷಿತವಾದ ಹಿಂದೂ ಧರ್ಮ ಸಿದ್ಧಾಂತಗಳನ್ನು ನಂಬುತ್ತಾರೋ ಅಲ್ಲಿಯವರೆಗೂ ಅವರಿಗೆ ಬಿಡುಗಡೆ ಇಲ್ಲ. ಪವಿತ್ರವಾದ ಮಾನವ ಜನ್ಮವನ್ನು ಮುಗ್ಧರನ್ನು ಜೀವ ಸಮಾಧಿ ಮಾಡಲು ಬಳಸಲ್ಪಡುವುದು ನಿಜವಾಗಿಯೂ ದುರದೃಷ್ಟಕರ.

ಬ್ರಾಹ್ಮಣ ಸಿದ್ಧಾಂತವನ್ನು ಸಾಯಿಸಿ,
ಹಿಂದೂ ಧರ್ಮವನ್ನು ರಕ್ಷಿಸಿ

ಇಂಡಿಯಾದಲ್ಲಿ ಅಸ್ಪೃಶ್ಯರು ಗಾಂಧೀಜಿಯಂತಹ ಶತ್ರುವನ್ನು ಹಿಂದೆಂದೂ ಪಡೆದಿರಲಿಲ್ಲ. ಸವರ್ಣೀಯರು ಹಿಂದೂಗಳಲ್ಲಿ ಜಾಗೃತಿ, ಚೈತನ್ಯ ಮೂಡಿಸಿ ಆಲೋಚಿಸುವಂತೆ ಮಾಡಿದಾಗಲೇ ನಿಮ್ಮ ಜಾತಿಗಳು ವಿಮುಕ್ತರಾಗಲು ಸಾಧ್ಯ. ಹಿಂದೂ ಮತೀಯರಲ್ಲಿ ಸಾಮಾಜಿಕ ಕ್ರಾಂತಿ ಬರಬೇಕು. ಹಿಂದೂ ಆಚಾರಗಳು, ಸಿದ್ಧಾಂತಗಳು, ಅಕ್ರಮ ನೀತಿ ಸೂತ್ರಗಳು, ಸಂಪ್ರದಾಯಗಳ ವಿರುದ್ಧವಾಗಿ ಅವರಲ್ಲಿ ಪ್ರತ್ಯಕ್ಷ ಕಾರ್ಯಕ್ರಮಗಳ ಮೂಲಕ ವಿಷಮ ಸಮಸ್ಯೆ ಸೃಷ್ಟಿಸಬೇಕು. ಆ ವಿಷಮ ಸಮಸ್ಯೆಯಿಂದ ಹಿಂದೂಗಳು ಆಲೋಚಿಸುವಂತಾಗಬೇಕು. ಅವರ ಹಳೆಯ ನಂಬಿಕೆಗಳಿಗೆ ಪೆಟ್ಟುಬಿದ್ದು, ಬದಲಾಗಲು ಸಿದ್ಧರಾಗಬಹುದು. ನಮ್ಮ ಹೋರಾಟದಲ್ಲಿನ ಸೈದ್ಧಾಂತಿಕ ದೋಷ ಇದೇ! ಈ ದೋಷವನ್ನು ತಿದ್ದಿಕೊಳ್ಳದೆ ಶಾಂತಿಯುತ ಹೋರಾಟ ವ್ಯರ್ಥ.

ನಿಮ್ಮ ಜಾತಿಗಳು ಬಲಶಾಲಿಗಳಾಗಲು, ಅಭಿವೃದ್ಧಿಯಾಗಲು ಯಾವ ಹಿಂದೂ

ನಾಯಕನ ಅಂತರಾತ್ಮವು ಒಪ್ಪುವುದಿಲ್ಲ. ನಿಮ್ಮ ಜಾರಿಗಳು ಬಲಶಾಲಿಗಳಾದರೆ ಅವರ ಮಾನವ ವ್ಯಾಪಾರ ಸಾಗದು.

ಹಿಂದೂಗಳಲ್ಲಿ ಮಾನಸಿಕ ಪರಿವರ್ತನೆಯಾದಾಗಲೇ ಅಸ್ಪೃಶ್ಯತೆ – ಅಸಮಾನತೆಗಳು ನಾಶವಾಗುವುದು. ಕಾನೂನಗಳು, ರಾಜಕೀಯ ಅಧಿಕಾರಗಳಿಂದ ಎಲ್ಲ ಜಾತಿಗಳಲ್ಲಿ ಐಕ್ಯತೆ ಸಾಧ್ಯವಿಲ್ಲ. ಪ್ರೇಮಪೂರ್ವಕವಾದ ಭಾವನೆ ಸಮಾಜದಲ್ಲಿ ನೆಲೆಯೂರದಾಗಲೇ ರಾಷ್ಟ್ರೀಯ ಏಕತೆ ಮತ್ತು ಭಾವೈಕತ್ಯೆ ಸಾಧ್ಯ.

ಅಸ್ಪೃಶ್ಯತೆ ಸವರ್ಣೀಯ ಹಿಂದೂಗಳಿಗೆ ಬಂಗಾರದ ಗಣಿಯಂತೆ. ಅವರು ಅದನು ಬಿಟ್ಟುಕೊಡಲಾರರು. ಮಹಾತ್ಮರು ಹುಟ್ಟಿತ್ತಾರೆ, ಸಾಯುತ್ತಾರೆ. ಆದರೆ ಅಸ್ಪೃಶ್ಯರು ಅಸ್ಪೃಶ್ಯರಾಗಿಯೇ ಉಳಿದುಹೋಗುತ್ತಿದ್ದಾರೆ.

ಕಲ್ಯಾಣ ಕಿರಣ ಓದುಗರಿಗೆ ಸೂಚನೆ

ಚಂದಾ ಅವಧಿ ಮುಗಿದವರಿಗೆ ಸೂಚನೆ ಕಳಿಸಲಾಗುವುದು. ತಕ್ಷಣ ಹಣ ಕಳಿಸಿರಿ, ನವೀಕರಿಸಿರಿ. ನಿಮ್ಮ ಮೊಬೈಲ್ ಸಂಖ್ಯೆ ಮರೆಯದೆ ತಿಳಿಸಿರಿ.

ವಿ.ಸೂ: ಚಂದಾ ಕಳಿಸಲು ಅನುಕೂಲ ಇಲ್ಲದವರು ಫೋನ್ ಮೂಲಕ ಪತ್ರಿಕೆ ಕಳಿಸಲು ತಿಳಿಸಿರಿ. ಕಲ್ಯಾಣ ಪರ್ವದಲ್ಲಿ ಚಂದಾ ಹಣವನ್ನು ಪ್ರಾಮಾಣಿಕವಾಗಿ ಕಟ್ಟಿರಿ.

ಸಂಪರ್ಕಿಸುವ ದೂರವಾಣಿ: 9945806297

ಅಕ್ಕನ ಅಮರವಾಣಿ

ಆರು ಭೂತಗಳಲ್ಲಿ ಆರಾರು ತತ್ವದಲ್ಲಿ
ಪೂರೈಸಿ ಇಪ್ಪ ಘನವನ್ನು । ಮನದಲ್ಲಿ
ಆರೈದು ತಿಳಿದಡವ ಮುಕ್ತ ॥

ದೇವರು ಜಡವಾದ ಪಂಚಭೂತಗಳನ್ನು ಅಂದರೆ ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ಉತ್ಪತ್ತಿ ಮಾಡಿ ಅದರೊಂದಿಗೆ ಚೈತನ್ಯವಾದ ಆತ್ಮವೊಂದನ್ನು ಸೃಷ್ಟಿಸಿ ಆರು ಭೂತಂಗಳಾಗಿ ಮಾರ್ಪಡಿಸಿ ಇವಕ್ಕೆ ಆರಾರು ತತ್ವಗಳನ್ನು ಅಳವಡಿಸಿದ್ದಾನೆ. ವಿವರಣೆ ಹೀಗಿದೆ. ಕ್ರಿಯಾ, ಜ್ಞಾನ, ಇಚ್ಛಾ, ಆದಿ, ಪರಾ, ಚಿಚ್ಛಕ್ತಿ ಎಂಬ ಷಡ್‌ವಿಧ ಶಕ್ತಿಗಳು, ಶ್ರದ್ಧಾ, ನಿಷ್ಠಾ, ಅವಧಾನ, ಅನುಭವ, ಆನಂದ, ಸಮರಸ ಷಡ್ವಿಧ ಭಕ್ತಿಗಳು, ನಿರಹಂಕಾರ, ಸುಮನ, ಸುಬುದ್ಧಿ, ಸುಚಿತ್ತ, ಸದ್ಭಾವ, ಷಡ್ವಿಧ ಹಸ್ತಗಳು. ಘ್ರಾಣ, ಜಿಹ್ವೆ, ನೇತ್ರ, ತ್ವಕ್, ಶ್ರೋತ್ರ, ಹೃದಯ ಎಂಬ ಷಡ್ವಿಧ ಮುಖಗಳು, ಮರವೆ ಅಜ್ಞಾನದಿಂದ ಮಾನವನು ಜನನ–ಮರಣವೆಂಬ ಪರಿಭವದ ದುಃಖಕ್ಕೆ ಈಡಾಗಿದ್ದಾನೆ. ಕಾರಣ ಅರುಹನ್ನು ಪಡೆದು, ಸುಜ್ಞಾನದ ಮಾರ್ಗವನ್ನು ಹಿಡಿದು. ಮಾಯೆಯನ್ನು ಗೆದ್ದು ದೇವನೊಡನೆ ಒಡವೆರೆದು ಒಂದಾದಾಗ ಮಾತ್ರ ಮುಕ್ತಾತ್ಮನಾಗುವನು ಎಂದು ಮನವರಿಕೆ ಮಾಡಿಕೊಡುತ್ತಿದ್ದಾರೆ ಮಹಾದೇವಿ ಅಕ್ಕನವರು.

ಮತ್ತೆ ಹಾಡುವೆ ಕುಹೂಽಽಽಽಽ... ಕುಹೂಽಽಽಽಽ...

ಎತ್ತಣ ಮಾಮರ ಎತ್ತಣ ಕೋಗಿಲೆ
ಎತ್ತಣಿಂದೆತ್ತ ಸಂಬಂಧವಯ್ಯಾ?
ಬೆಟ್ಟದ ನೆಲ್ಲಿಕಾಯಿ ಸಮುದ್ರದ ಉಪ್ಪು
ಎತ್ತಣಿಂದೆತ್ತ ಸಂಬಂಧವಯ್ಯಾ?
ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯಾ?

ಪ್ರತಿ ವರ್ಷ ವಸಂತ ಋತು ಬಂದಾಗ ಪ್ರಕೃತಿಯೇ ಹೊಸ ಬಟ್ಟೆಯನ್ನು ಧರಿಸಿ ಭೂರಮೆಯನ್ನು ಸುಂದರಗೊಳಿಸುತ್ತದೆ. ಅದರಲ್ಲೂ ಮಾವಿನ ವನ ಹೊಸ ಚಿಗುರಿನಿಂದ ಶೃಂಗರಿಸಿಕೊಂಡು ಕೋಗಿಲೆಗಳ ಬರುವಿಕೆಗಾಗಿ ಸಡಗರದಿಂದ ಕಾಯುತ್ತಿರುತ್ತದೆ. ಕೋಗಿಲೆಗಳು ಬಂದು ಎಲೆಯ ಚಿಗುರನ್ನು ತಿಂದು ಸುಮಧುರವಾದ ಕುಹೂ.... ಕುಹೂ.... ರಾಗವನ್ನು ಹಾಡುತ್ತಾ ಕವಿಗಳಿಗೆ, ರಸಿಕರಿಗೆ, ದೇವ ವಿರಹಿಗಳಿಗೆ, ಪ್ರೋತ್ಸಾಹದಾಯಕ ಗಾನವನ್ನು ಹಾಡುತ್ತ ಅವರ ಮನಗಳಿಗೆ ಮುದ ನೀಡುತ್ತದೆ. ಮಾಮರ ಎಲ್ಲೋ ಕೋಗಿಲೆ ಮತ್ತೆಲ್ಲೋ ಇರುತ್ತದೆ. ವಸಂತ ಬಂದಾಗ ಮಾಮರದೆಡೆಗೆ ಹಾರಿ ಬರುತ್ತದೆ.

ಆದೇ ರೀತಿ ಶರಣ ಮೇಳ ಎನ್ನುವ ವಸಂತ ಋತು ಬಂದಾಗ ಧರ್ಮ ಕ್ಷೇತ್ರ ಕೂಡಲ ಸಂಗಮ ಎನ್ನುವ ಮಾವಿನ ವನದಲ್ಲಿ ಅನುಭಾವಿಗಳು, ಜ್ಞಾನಿಗಳು, ಮಿಗಿಲಾಗಿ ಪೂಜ್ಯ ಲಿಂಗಾನಂದ ಸ್ವಾಮೀಜಿಯವರು ಕಾರುಣ್ಯದಿಂದ ಬೆಳೆಸಿದ ಪೂಜ್ಯ ಮಾತಾಜಿ, ಪೂಜ್ಯ ಗಂಗಾ ಮಾತಾಜಿ ಮತ್ತು ಹಲವಾರು ಸ್ವಾಮೀಜಿಯವರು ಎನ್ನುವ ಮಾವಿನ ಮರಗಳು, ಹೊಸ ಹೊಸ ವಿಚಾರಗಳು ಅನುಭಾವಗಳು ಮತ್ತು ಚಿಂತನೆ ಎನ್ನುವ ಚಿಗುರುಗಳನ್ನು ಮೈದುಂಬಿಕೊಂಡು ಶರಣ ಕೋಗಿಲೆಗಳ ಬರುವಿಕೆಗಾಗಿ ಸಡಗರ ಸಂಭ್ರಮದಿಂದ ಕಾಯುತ್ತಿರುತ್ತಾರೆ. ಕರು ಹಸಿದಾಗ ಹಾಲು ಕುಡಿಯಬೇಕು ಎನ್ನುವ ಹಂಬಲ ಎಷ್ಟಿರುತ್ತದೆಯೋ ಅದಕ್ಕಿಂತ ಹೆಚ್ಚಿನ ಹಂಬಲ ಅದನ್ನು ಹೆತ್ತ ಹಸುವಿಗೆ ಹಾಲೂಡಿಸಬೇಕು ಎಂದು ಇರುತ್ತದೆ. ಹಾಗೆಯೇ ಪೂಜ್ಯ ಮಾತಾಜಿಯವರಿಂದ ಜ್ಞಾನಾಮೃತ ಹಾಲನ್ನು ಕುಡಿಯಲು ನಮಗೆಷ್ಟು ಕಾತುರವೋ ಅದಕ್ಕಿಂತ ಹೆಚ್ಚಿನ ಕಾತುರ ಅದನ್ನು ಧಾರೆ ಎರೆಯಲು ಪೂಜ್ಯರಿಗಿದೆ.

ಪೂಜ್ಯ ಗಂಗಾ ಮಾತಾಜಿಯವರು ಕರ್ನಾಟಕ ರಾಜ್ಯ ಮಾತ್ರವಲ್ಲ ನೆರೆಯ ರಾಜ್ಯಗಳಾದ ಆಂಧ್ರ, ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ಸಂಚರಿಸಿ ಅಲ್ಲಿರುವ ಎಲ್ಲಾ ಶರಣ ಕೋಗಿಲೆಗಳನ್ನು ಶರಣ ಮೇಳಕ್ಕೆ ಆಹ್ವಾನಿಸುತ್ತಾ ಶರಣ ಮೇಳಕ್ಕೆ ಶರಣ ಕೋಗಿಲೆಗಳ ದಂಡಿನೊಡನೆ ಆಗಮಿಸಲಿದ್ದಾರೆ.

ಒಂದೋ ಎರಡೋ ಕೋಗಿಲೆಗಳು ಕೂಗುತ್ತಲಿದ್ದರೆ, ಕೇಳಲಿಕ್ಕೆ ಎಷ್ಟೊಂದು ಮಧುರ ಆನಂದ! ಸಾವಿರಾರು ಕೋಗಿಲೆಗಳು ಏಕ ಕಾಲಕ್ಕೆ ಕೂಗುತ್ತಿದ್ದರೆ, ಆ ಆನಂದದ ಸವಿಯನ್ನು ವರ್ಣಿಸಲು

ಶಬ್ದಗಳೇ ಸಾಲವು. ಹಾಗೆಯೇ ಶರಣ ಮೇಳದಲ್ಲಿ ಲಕ್ಷಲಕ್ಷ ಶರಣ ಕೋಗಿಲೆಗಳು ಬಸವ ಭಕ್ತಿಯ ಕುಹೂ ಕುಹೂ ರಾಗ, ಸಮುದಾಯ ಪ್ರಾರ್ಥನೆಯಲ್ಲಿ ಹಾಡುವ ದೃಶ್ಯವನ್ನು ಆ ಸಂದರ್ಭದಲ್ಲಿ ಆಗುವ ಗುರು-ಲಿಂಗ-ಜಂಗಮರ ಅನುಗ್ರಹದ ದಿವ್ಯಾನುಭವದ ಆನಂದವನ್ನು ವರ್ಣಿಸಲು ಶಬ್ದಗಳೇ ಸೋಲುತ್ತವೆ.

ಅಲ್ಲಿ ಧರ್ಮಪಿತರಂತೂ ತಮ್ಮ ಮರಿ ಕೋಗಿಲೆಗಳ ಬರುವಿಕೆಗಾಗಿ, ಗಿಳಿಯ ಹಂಜರವಿಕ್ಕಿ ಸೊಡರಿಂಗೆಣ್ಣೆಯನೆರೆದು ಬತ್ತಿಯನಿಕ್ಕಿ ಜ್ಯೋತಿ ಹಚ್ಚಿ ಕಾಯುತ್ತಿರುತ್ತಾರೆ. ಇಂದೆನ್ನ ಮನೆಗೆ ಪ್ರಮಥರು ಬಂದಹರೆಂದು ಗುಡಿ ತೋರಣವ ಕಟ್ಟಿ, ಷಡುಸಮ್ಮಾರ್ಜನೆಯ ಮಾಡಿ ರಂಗವಾಲಿಯನ್ನಿಕ್ಕಿ ಉಘೇ ಚಾಂಗು ಭಲಾ ಎಂಬೆ .., ನಚ್ಚು ಮೆಚ್ಚಿನ ಶರಣರೆನ್ನ ಕಣ್ಣ ಮುಂದೆ ಬಂದು ನಿಂದಿರಲು, ಎನ್ನ ಕಂಗಳ ಬಗೆದು ಕಂಗಳೊಳಗಿಂಬಿಟ್ಟು ಕೊಂಬೆನು,ಎನ್ನ ಮನವ ಬಗೆದು ಮನದೊಳಗಿಂಬಿಟ್ಟುಕೊಂಬೆನು, ಎನ್ನ ತನುವ ಬಗೆದು ತನುವಿನೊಳಗಿಂಬಿಟ್ಟು ಕೊಂಬೆನು, ಲಿಂಗದೇವನ ಶರಣರೆನ್ನ ಒಡೆಯರಾಗಿ ಮನೆಗೆ ಬಂದರೆ ಅವರ ಪಾದಕ್ಕೆ ಭಕ್ತಿಯ ಮಾಡುವೆನು. ಎಂದು ನಮ್ಮನ್ನೆಲ್ಲಾ ಇಂಬಿಟ್ಟುಕೊಳ್ಳಲು ಎಷ್ಟೊಂದು ಕಾತುರ, ತವಕ ಅವರಿಗೆ ನೋಡಿ! ತಾವು ಒಬ್ಬ ಪ್ರಧಾನಿಯಾಗಿ, ಧರ್ಮ ಕರ್ತೃವಾಗಿ, ನಮ್ಮೆಲ್ಲರನ್ನು ಉದ್ಧರಿಸಿದ ಮಹಾ ಗುರುವಾದರೂ ಅವರಲ್ಲಿ ಸಾಸುವೆಯಷ್ಟೂ ಅಹಂ ಇಲ್ಲವೇ ಇಲ್ಲ. ತಾವೇ ಅನುಗ್ರಹಿಸಿದ ನಮ್ಮ ಬರುವಿಕೆಗಾಗಿ ಧರ್ಮಪಿತರು ಇಷ್ಟೊಂದು ವಿನಯ ಶೀಲರಾಗಿ ಕಾಯುತ್ತಿದ್ದಾರೆ ಎಂದಾಗ ನಾವು ಅವರ ಭಾವನೆಗಳಿಗೆ ಸ್ಪಂದಿಸಿ ಅವರ ಶ್ರೀ ಚರಣದಲ್ಲಿ ಮನವನ್ನು ಮಗ್ನಗೊಳಿಸಲು ಕೂಡಲ ಸಂಗಮಕ್ಕೆ ಹೋಗುವುದು ನಮ್ಮೆಲ್ಲರ ಕರ್ತವ್ಯವಲ್ಲವೇ?

ಅಂದು ಶರಣರನ್ನು ಬಿಟ್ಟು ಕಲ್ಯಾಣದಿಂದ ಅಗಲುವಾಗ, ಜಜ್ಜನೆ ಜರಿದೆನು, ಜಜ್ಜನೆ ಜರಿದೆನು ನೋಡಯ್ಯಾ! ಬಿಬ್ಬನೆ ಬಿರಿದೆನು ಬಿಬ್ಬನೆ ಬಿರಿದೆನು ನೋಡಯ್ಯ, ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆನು ಲಿಂಗದೇವಾ ನಿಮ್ಮ ಶರಣರನಗಲಿದ ಕಾರಣ! ಎಂದು ನೊಂದು ಕೂಡಲ ಸಂಗಮಕ್ಕೆ ಹೋದರು. ಆದರೂ "ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ ಬಳಿದಪ್ಪಿದ ಪಶು ತನ್ನ ಹಿಂಡನರಸುವಂತೆ, ಬಯಸುತ್ತಿರ್ದೆನಯ್ಯಾ ನಿಮ್ಮ ಭಕ್ತರ ಬರವನ್ನು, ದಿನಕರನುದಯಕ್ಕೆ ಕಮಳ ವಿಕಸಿತವಾದಂತೆ ಎನಗೆ ನಿಮ್ಮ ಶರಣರ ಬರವು" ಎಂದು ಸದಾಕಾಲ ನಮ್ಮ ಬರುವಿಕೆಗಾಗಿಯೇ ಅವರ ಹೃದಯ ಮಿಡಿಯುತ್ತಿರುತ್ತದೆ. ಅಕ್ಕ ಹೇಳುವಂತೆ ಶರಣಮೇಳದಲ್ಲಿ ಧರ್ಮಪಿತರು ಆದಿ ಅನಾದಿಯೆನ್ನದೆ ಗಣ ಮೇಳಾಪವಾಗಿ ಬಂದು ನಮ್ಮನ್ನೆಲ್ಲಾ ಅನುಗ್ರಹಿಸುತ್ತಾರೆ.

ಅಯ್ಯಾ, ನಿಮ್ಮ ಶರಣರನ್ನು ಕಂಡರೆ ಸುಖ; ಕಾಣದಿದ್ದರೆ ಅವಸ್ಥೆಯಯ್ಯಾ ಎಂದು ಧರ್ಮಪಿತರು ಅಷ್ಟೊಂದು ಹಂಬಲಿಸಿದರೆ ಆ ಮಹಾ ಗುರುವಿನ ಐಕ್ಯ ಕ್ಷೇತ್ರಕ್ಕೆ ಹೋಗಲು, ಅವರ ಸಂದೇಶವನ್ನು ಕೇಳಲು ನಾವೆಷ್ಟು ಕಾತುರರಾಗಬೇಕು! ನಾವೇನೇ ಮಾಡಿದರೂ ಆ ಮಹಾಗುರುವಿನ ತ್ಯಾಗಕ್ಕೆ ಶರಣರ ಬಲಿದಾನಕ್ಕೆ ಸಮವಾದೀತೆ? ಸಾಧ್ಯವೇ ಇಲ್ಲ. ಗುರು ಬಸವ ಜ್ಯೋತಿ ಶರಣ ಮೇಳದಲ್ಲಿ ಪ್ರಜ್ವಲಮಾನವಾಗಿ ಬೆಳಗುತ್ತದೆ. ಬನ್ನಿ.... ನಮ್ಮ ಬಾಳಿನ ಹಣತೆಗಳನ್ನು ಹೊತ್ತಿಸಿಕೊಂಡು ಬೆಳಗುವ ಜ್ಯೋತಿಗಳಾಗೋಣ. ಶರಣ ಮೇಳಕ್ಕೆ ಬಂದು ಶರಣ ಕೋಗಿಲೆಗಳೊಡನೆ ಕೂಡಿ, ಆಡಿ, ಭಕ್ತಿ

ರಾಗವನ್ನು ಹಾಡೋಣ. ಬಸವಾತ್ಮಜೆಯ ಹಾಗೂ ಗುರುಬಸವಣ್ಣನವರ ಕಾರುಣ್ಯಜಲದಲ್ಲಿ ಮಿಂದು ಪಾವನರಾಗೋಣ.

ಬೆಟ್ಟದ ನೆಲ್ಲಿಕಾಯಿ ಸಮುದ್ರದ ಉಪ್ಪು ಎತ್ತಣಂದೆತ್ತ ಸಂಬಂಧವಯ್ಯಾ ಆತ್ಮೀಯ ಶರಣ ಬಂಧುಗಳೇ ತಮಗೆಲ್ಲ ಗೊತ್ತಿದೆ; ತಿಂಗಳಿಗೊಮ್ಮೆ ಹುಣ್ಣಿಮೆಯಂದು ಪೂರ್ಣ ಚಂದ್ರನನ್ನು ನೋಡಿ ಸಮುದ್ರ ಉಕ್ಕುತ್ತದೆ. ಹಾಗೆ ಉಕ್ಕಿ ಹರಿದ ನೀರನ್ನು ಬೇರೆ ಕಡೆಗೆ ಹಾಯಿಸಿ ಉಪ್ಪನ್ನು ತಯಾರಿಸುತ್ತಾರೆ. ಎಲ್ಲೋ ಬೆಟ್ಟದ ಮೇಲೆ ಬೆಳೆದ ನೆಲ್ಲಿಕಾಯಿ, ತಾನಿರುವ ಸ್ಥಾನದಲ್ಲೇ ಇದ್ದರೆ ಕೆಲವೇ ದಿನಗಳಲ್ಲಿ ತನ್ನಲ್ಲಿ ಯಾವುದೇ ಹೊಸ ರುಚಿಯನ್ನು ಮೈಗೂಡಿಸಿಕೊಳ್ಳದೇ ಬಿದ್ದು ಹೋಗುತ್ತದೆ. ನಂತರ ಕೊಳೆತು ಹೋಗುತ್ತದೆ. ಆದರೆ ಅದೇ ನೆಲ್ಲಿಕಾಯಿ ಉಪ್ಪಿನೊಂದಿಗೆ ಬೆರೆತಾಗ ಉಪ್ಪಿನ ಕಾಯಿಯಾಗಿ, ಕೊಳೆಯುವ ಬದಲಿಗೆ ಕಳಿಯುತ್ತದೆ. ಅದಕ್ಕೆ ಹೊಸ ರುಚಿ ಬಂದು ಎಲ್ಲರ ಮೆಚ್ಚುಗೆಗೆ ಪಾತ್ರವಾಗುತ್ತದೆ.

ಹಾಗೆಯೇ ದಿನದಿಂದ ದಿನಕ್ಕೆ ಹೆಚ್ಚು ಪ್ರಸ್ತುತವಾದ ಗುರುಬಸವಣ್ಣನವರ ತತ್ವಗಳು ನಮ್ಮ ನಿಲುವಿಗೆ ನಿಲುಕದ ಆ ಮಹಾಗುರು ಬಸವಣ್ಣನವರೆಂಬ ಪೂರ್ಣಚಂದ್ರನನ್ನು ನೋಡಿ ಅನೇಕ ವಿಚಾರಗಳು ಎನ್ನುವ ಮುತ್ತು ರತ್ನ ಹವಳಗಳನ್ನು ಗರ್ಭೀಕರಿಸಿಕೊಂಡಿರುವ ಮಾತಾಜಿಯವರ ಹೃದಯ ಶರಧಿ ಉಕ್ಕಿ ಅಲ್ಲಿ ಸ್ವಾನುಭಾವದ ಉಪ್ಪು ತಯಾರಾಗುತ್ತದೆ. ನಾವು ಹುಟ್ಟಿದ ಜಾಗದಲ್ಲೇ ಇದ್ದರೆ ಯಾವ ರೀತಿ ಹುಟ್ಟಿದ್ದೇವೆಯೋ ಅದೇ ರೀತಿ ಒಂದು ದಿನ ಸಾಯುತ್ತೇವೆ. ಆದರೆ ಶರಣ ಮೇಳದಲ್ಲಿ ಬಸವ ತತ್ವದ ಉಪ್ಪನ್ನು ನಮ್ಮ ಜೀವನಕ್ಕೆ (ನೆಲ್ಲಿಕಾಯಿಯಂತೆ) ಸ್ಪರ್ಶಿಸಿಕೊಂಡರೆ ನಮ್ಮ ಜೀವನ ಕೊಳೆಯುವ ಬದಲಿಗೆ ಕಳಿತು ಹೊಸ ಅರ್ಥವನ್ನು ಪಡೆದುಕೊಳ್ಳುತ್ತದೆ. ಲಿಂಗದೇವನಿಗೆ ಪ್ರಿಯವಾದ ಬದುಕು (ಉಪ್ಪಿನಕಾಯಿ) ನಮ್ಮದಾಗುತ್ತದೆ.

ಇನ್ನೂ ಯಾರಾದರೂ ಶರಣ ಮೇಳಕ್ಕೆ ಹೋಗೋಣವೇ ಬೇಡವೇ ಎಂದು ಯೋಚಿಸುತ್ತಿದ್ದರೆ ದಯವಿಟ್ಟು ಆ ಯೋಚನೆಯನ್ನು ಬಿಟ್ಟು, ಈ ಶರಣ ಮೇಳಕ್ಕೆ ಬನ್ನಿ . ಈಗಾಗಲೇ ಶರಣ ಮೇಳಕ್ಕೆ ಬಂದವರಿಗೆ ಶರಣ ಮೇಳದಲ್ಲಿ ಸಿಗುವ ದಿವ್ಯಾನಂದದ ಬಗೆ ಗೊತ್ತಿದೆ. ಇನ್ನೂ ಬರದೇ ಇರುವವರು ಒಂದು ಸಲ ಬಂದು ನೋಡಿರಿ; ಆ ಮೇಲೆ ನನ್ನ ಮಾತು, ಅನುಭವ ನಿಮಗೆ ನಿಜ ಎನಿಸುತ್ತದೆ.

ಅದಕ್ಕಾಗಿ ಶರಣ ಬಂಧುಗಳೇ ಬನ್ನಿ, ನಾವೆಲ್ಲಾ ಸೇರಿ ಗುರು ಬಸವ ತಂದೆಯನ್ನು ಹಾಗೂ ಆದಿ ಶರಣರನ್ನು ಕೊಂಡಾಡೋಣ. ಭಕ್ತಿ ಸಂಬಂಧವನ್ನು ಮೆರೆದು, ಭಕ್ತಿಯ ಕುಹೂ ಕುಹೂ ರಾಗ ಹಾಡಿ ಲಿಂಗದೇವನ ಮೆಚ್ಚುಗೆಯ ಮಕ್ಕಳಾಗೋಣ. ಮಾತಾಜಿಯವರ ಮಮತೆಯ ಕುಡಿಗಳಾಗೋಣ. ತಮ್ಮೆಲ್ಲರ ಬರುವಿಕೆಗಾಗಿ ಎನ್ನ ತನುವಿಡಿದವರ ತನುವ ಬೆರೆಸುವೆ, ಎನ್ನ ಮನವಿಡಿದವರ ಮನವ ಬೆರೆಸುವೆ ಎಂದು ಅಪ್ಪ ಬಸವಣ್ಣನವರು ತಮ್ಮ ಹೃದಯದ ಬಾಗಿಲನ್ನು ತೆರೆದು ಕಾಯುತ್ತಿರುತ್ತಾರೆ. ಬರುತ್ತೀರಿ ತಾನೆ? ತಮ್ಮೊಡನೆ ಶರಣ ಮೇಳದಲ್ಲಿ ಸೇರಿ ಭಕ್ತಿಯ ಕುಹೂಽಽಽಽ... ಕುಹೂಽಽಽಽ... ರಾಗ ಹಾಡಲು ಕಾತುರನಾಗಿರುವ,

ತಮ್ಮವನೇ ಆದ
ಮರಿ ಕೋಗಿಲೆ ಸಚ್ಚಿದಾನಂದ

ವೈಶಿಷ್ಟ್ಯಗಳ ಸಂಗಮ: ಶರಣ ಮೇಳ

– ಕರಿಬಸಪ್ಪ ಕೋರಿಶೆಟ್ಟರ್

"ನವ ವರ್ಷಾರಂಭದಲ್ಲಿ ಪ್ರತಿಯೊಬ್ಬ ಬಸವ ಭಕ್ತರ ಹೃದಯದಲ್ಲಿ ಅಣುರಣಿಸುವ ಪದ "ಶರಣ ಮೇಳ". ಸಡಗರ ಸಂಭ್ರಮಗಳಿಂದ ನವದಂಪತಿಗಳಿಂದ ಮೊದಲುಗೊಂಡು ಅಬಾಲವೃದ್ಧರಾದಿಯಾಗಿ ಸಮಾವೇಶಗೊಂಡು ಪುನೀತರಾಗುವ, ಬದುಕಿಗೆ ನವಚೈತನ್ಯ ಹೊಂದುವ ಸಂಜೀವಿನಿಯೇ "ಶರಣ ಮೇಳ".

ಸಿಖ್ ಧರ್ಮೀಯರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯಾ, ಮಹಮ್ಮದೀಯರಿಗೆ ಮೆಕ್ಕಾ, ಕ್ರೈಸ್ತರಿಗೆ ಜೆರೋಸಲಂ ಸಾಂಪ್ರದಾಯಿಕ ಹಿಂದೂಗಳಿಗೆ ಕಾಶಿ ಶ್ರದ್ಧಾಕೇಂದ್ರಗಳಾದಂತೆ ಲಿಂಗಾಯತ ಧರ್ಮೀಯರಿಗೆ ಕೂಡಲ ಸಂಗಮೇ ಶ್ರದ್ಧಾಕೇಂದ್ರ ಇದುವೇ ಧರ್ಮಕ್ಷೇತ್ರ. ಇಂಥ ಪವಿತ್ರ ಭೂಮಿಯಲ್ಲಿ ಪರಸ್ಪರ ಭಕ್ತಿ ಸಂಬಂಧದಿಂದ ಸಮಾವೇಶಗೊಂಡು ಐದು ದಿನಗಳವರೆಗೆ ನಲಿಯುವ ಇಂಥ ಮಹೋತ್ಸವದಲ್ಲಿ ಪಾಲ್ಗೊಂಡಾಗಲೇ ಜನ್ಮಸಾರ್ಥಕವಾಗುವ ಅನುಭವ.

ಜನವರಿ 11ರಿಂದ 14ರವರೆಗೆ ಕೃಷ್ಣಾ–ಮಲಪ್ರಭಾ ನದಿಗಳ ಸಂಗಮವಾದ ಕೂಡಲ ಸಂಗಮದಲ್ಲಿ ಹಮ್ಮಿಕೊಳ್ಳುವ ಶರಣ ಮೇಳ ವಿವಿಧ ವೈಶಿಷ್ಟ್ಯಗಳ ಸಂಗಮ. ಬಸವ ಧರ್ಮ ಪೀಠದ ಆವರಣದಲ್ಲಿ ಸಮಾವೇಶಗೊಳ್ಳುವ ಲಕ್ಷಾಂತರ– ಶರಣ ಶರಣೆಯರು ಒಂದಡೆಕುಳಿತು ಭಕ್ತಿ–ಭಾವದಿಂದ ಮಾಡುವ ಸಮುದಾಯ ಪ್ರಾರ್ಥನೆಯ ಆ ದೈವೀ ದೃಶ್ಯವನ್ನು ದರ್ಶಿಸಲು ಎರಡು ಕಣ್ಣುಗಳೂ ಸಾಲದೇನೋ ಅನ್ನಿಸುತ್ತದೆ.

ಯಾವುದೇ ಧರ್ಮ ಸುಗಮವಾಗಿ ಸಾಗಲು ಅದಕ್ಕೆ ಧರ್ಮಗುರುವಿನ ಮೇಲೆ ಭಕ್ತಿ–ಧರ್ಮಗ್ರಂಥದ ಮೇಲೆ ನಿಷ್ಠೆ ಅತ್ಯಗತ್ಯ. ಮೊಹಮ್ಮದ್ ಪೈಗಂಬರ್ ಮೇಲೆ ಭಕ್ತಿ – ಕುರಾನ್ ಮೇಲೆ ನಿಷ್ಠೆ, ಮುಸ್ಲಿಂ ಧರ್ಮದ ಸಂಘಟನೆ ಮತ್ತು ಬೆಳವಣಿಗೆಗೆ ಕಾರಣವಾಗಿದೆ. ಹಾಗೆಯೇ ಗೌತಮಬುದ್ಧನ ಮೇಲೆ ಶ್ರದ್ಧೆ ಯೇಸುಕ್ರಿಸ್ತನ ಮೇಲೆ ಭಕ್ತಿ–ಬೈಬಲ್ ಮೇಲೆ ನಿಷ್ಠೆ. ಗುರುನಾನಕ್ ಮೇಲೆ ಭಕ್ತಿ–ಗ್ರಂಥ ಸಾಹೇಬ್ ಮೇಲೆ ನಿಷ್ಠೆಯಿಂದ ಸಿಖ್ ಧರ್ಮಗಳು ಸಂಘಟನೆ–ಸಂಸ್ಕಾರ ಹೊಂದಿವೆ. ಆದರೆ ಧರ್ಮಗುರು ಬಸವಣ್ಣನವರ ಮೇಲೆ ಭಕ್ತಿ–ಧರ್ಮ ಗ್ರಂಥ ವಚನ ಸಾಹಿತ್ಯದ ಮೇಲೆ ಶ್ರದ್ಧೆ ಮೂಡಿದಾಗಲೇ ಲಿಂಗಾಯತ ಧರ್ಮದ ಸರ್ವಾಂಗೀಣ ಪ್ರಗತಿ ಸಾಧ್ಯವೆಂದು ಮನಗಂಡ ಲಿಂಗೈಕ್ಯ ಮಹಾ ಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರು 1988ರಿಂದ ಪ್ರಾರಂಭಿಸಿದ ಈ ಮಹೋತ್ಸವ ಪೂಜ್ಯ ಮಾತಾಜಿಯವರ ಕರ್ಣಧಾರತ್ವದಲ್ಲಿ 31ನೇ ವರ್ಷದತ್ತ ದಾಪುಗಾಲು ಇಡುತ್ತಲಿದೆ.

ಪೂಜ್ಯ ಮಾತಾಜಿಯವರ ಕಲ್ಪನೆಯ ಆರೈಕೆಯ ಸಂಘಟನೆಯಾದ ನಿಷ್ಠಾವಂತ–ತತ್ವನಿಷ್ಠೆ ಶರಣ –ಶರಣೆಯರ ಒಕ್ಕೂಟವಾದ ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರ ಅವಿಶ್ರಾಂತ ಪರಿಶ್ರಮದ ಫಲವಾಗಿ ಏರ್ಪಾಡಾಗುವ ಶರಣ ಮೇಳ ಬೇರೆ ರೀತಿಯ ಸಮಾವೇಶಗಳಿಂದ ವಿಭಿನ್ನವಾದದು, ವೈಶಿಷ್ಟ್ಯವಾದುದು. ಗುರು ಬಸವ ಸಂಸ್ಥಾಪಿತ ಲಿಂಗಾಯತ ಧರ್ಮದಲ್ಲಿ ಜಂಗಮ, ಬಣಜಿಗ, ಪಂಚಮಸಾಲಿ, ಸಾಧು, ನೊಳಂಬ

ಇವೇ ಮುಂತಾದ ಒಳಪಂಗಡಗಳ ರುದ್ರನರ್ತರ, ವೈಭವೀಕರಣಗಳೇ ಅಧಿಕವಾಗಿರುವ ಇಂದಿನ ಕಲುಷಿತ ವಾತಾವರಣದಲ್ಲಿ ಯಾವುದೇ ಒಳಪಂಗಡಗಳ ಭೇದವಿಲ್ಲದೇ ಎಲ್ಲರೂ ಸಮಾವೇಶಗಳ್ಳುವ ಮೂಲಕ ಅಖಂಡ ಸಮಾಜ ಕಟ್ಟುವ ಕೈಂಕರ್ಯ ಮಾಡುತ್ತಿರುವುದು ಈ ಶರಣ ಮೇಳ.

ಸಾಮಾನ್ಯವಾಗಿ ಜಾತ್ರೆ, ಉತ್ಸವ, ಪುಣ್ಯಾರಾಧನೆಯಂತಹ ಕಾರ್ಯಕ್ರಮಗಳಲ್ಲಿ ಆಯಾ ಪ್ರದೇಶದ ಜನರೇ ಸಮಾವೇಶಗೊಂಡು ಚದುರುವುದೇ ಹೆಚ್ಚು. ಆದರೆ 5 ರಾಜ್ಯ ಜನರು ಒಂದೇ ಕಡೆ ಸೇರಿ ಸಂಭ್ರಮಿಸುವ ಆ ಮೂಲಕ ಕನ್ನಡ, ಮರಾಠಿ, ತೆಲಗು, ತಮಿಳು ಹೀಗೆ ಭಾಷಾ ಭೇದ ಮರೆತು ಒಂದಾಗಿ ಕೂಡಲ ಸಂಗಮದಲ್ಲಿ ಐದು ದಿನಗಳವರೆಗೆ "ಪುಟ್ಟಭಾರತ" ನಿರ್ಮಾಣ ಮಾಡುವುದೇ ಈ ಶರಣ ಮೇಳ.

ರಾಜಕೀಯ ನೇತಾರರ ರ್‍ಯಾಲಿಗಳಲ್ಲಿ ತಲೆಗೆ 300–400 ಕೊಟ್ಟು ಲಾರಿ–ಬಸ್–ಟ್ರೇನ್‌ಗಳಲ್ಲಿ ಜನರನ್ನು ಸೇರಿಸಿ ಅರ್ಥವಿಲ್ಲದ ಭಾಷಣ ಕೇಳಿಸುವ ಸಮಾವೇಶಗಳಂತೆ ಅಲ್ಲ. ಬದಲಾಗಿ ತಾವೇ ಪ್ರತಿನಿಧಿ ಶುಲ್ಕ ಭರಿಸಿ ಗುರುಕಾಣಿಕೆ ಸಲ್ಲಿಸಿ, ತನು–ಮನ ಮುಟ್ಟಿ ಧರ್ಮಗುರುವಿನ ಸೇವೆ ಸಲ್ಲಿಸಿ ಕೃತಾರ್ತರಾಗುವ ನಿಷ್ಠಾವಂತರ ಸಂಗಮವೇ ಶರಣ ಮೇಳ.

ಸರ್ಕಾರದಿಂದ ಕೋಟ್ಯಾಂತರ ಅನುದಾನ ಪಡೆದು ಸಂಸ್ಕೃತಿಯ ಸೋಗಿನಲ್ಲಿ ಕೀಳು ಅಭಿರುಚಿಯ ಕಾರ್ಯಕ್ರಮಗಳನ್ನು ನಡೆಸಿ ದುಂದು ವೆಚ್ಚ ಮಾಡುವ "ಸಮ್ಮೇಳನ"ಗಳನ್ನೇ ನಡೆಯುತ್ತಿರುವ ಸಂದರ್ಭದಲ್ಲಿ ಸರ್ಕಾರದಿಂದ ಒಂದೇ ಒಂದು ರೂಪಾಯಿ ಅನುದಾನ ಪಡೆಯದೇ ಪ್ರತಿಯೊಬ್ಬ ಬಸವ ಭಕ್ತ ಬೆವರಿನ ಹನಿಯಿಂದ ಕಾಯಕದ ಪ್ರತಿಫಲವಾಗಿ ಗಳಿಸಿದ ಲಿಂಗಾರ್ಪಿತ ಸೊಮ್ಮಿನಿಂದ ಹಮ್ಮಿಕೊಳ್ಳುವ ಪರಿಶುದ್ಧ ಉತ್ಸವವೇ ಶರಣಮೇಳ. ಸೆಲೆಬ್ರಿಟಿಗಳನ್ನು, ನಟನಟಿಯರನ್ನು ಕರೆಸಿ ಜನರನ್ನು ಸೆಳೆಯುವ ಸಮಾವೇಶಗಳ ಮಧ್ಯೆ ಅತಿಥಿಗಳು ಮುಖ್ಯಮಂತ್ರಿಯೇ ಇರಲಿ, ಇನ್ನಾವುದೇ ಗಣ್ಯರೇ ಇರಲಿ ಅವರನ್ನು ಲೆಕ್ಕಿಸದೇ ನಮಗೆ ಪೂಜ್ಯ ಮಾತಾಜಿಯವರ ಪ್ರವಚನ ಸುಧೆ ಆರಿಸುವರೇ ಮುಖ್ಯ ಎಂದು ಅನನ್ಯ ಗುರು ಭಕ್ತಿಯ ಸಂಸ್ಕಾರವಂತರ ಸಮಾವೇಶವೇ ಶರಣಮೇಳ.

ಎಷ್ಟೇ ದೂರದವರಿದ್ದರೂ ಪರಸ್ಪರ ಅಣ್ಣ ತಮ್ಮ, ಅಕ್ಕ–ತಂಗಿಯರಂತೆ ಬೆರೆತು ಶ್ರೀಮಂತ–ಬಡವ ಭೇದವಿಲ್ಲದೇ ಧರ್ಮಕ್ಷೇತ್ರದಲ್ಲಿ 5 ದಿನಗಳವರೆಗೆ ಸೇರಿ ಹಾಡಿ–ಪಾಡಿ, ನಕ್ಕು–ನಲಿದು ಬದುಕಿಗೆ ನವಚೈತನ್ಯ ಪಡೆಯುವ ಸದಾಕಾಯಕ ಶೀಲರ ಸಮ್ಮಿಲನವೇ ಈ ಶರಣ ಮೇಳ.

ಹೀಗೆ ವಿವಿಧ ವೈಶಿಷ್ಟ್ಯಗಳಿಂದ ಕೂಡಿದ ಈ ಉತ್ಸವ ಬಸವ ಭಕ್ತರ– ಲಿಂಗಾಯತ ಧರ್ಮೀಯರ ಬಾಳಿನ ಚೈತನ್ಯದಾಯಿನಿ. ಬನ್ನಿ ಶರಣ ಮೇಳಕ್ಕೆ ಹಾಡಿ–ಪಾಡಿ–ನಕ್ಕು ನಲಿದು ಧರ್ಮಗುರುವಿನ ದಿವ್ಯಾನುಗ್ರಹ ಪಡೆದು ಹೊಸಬೆಳಕು ಪಡೆಯೋಣ.

ಸ್ವಯಂ ಸೇವಕರಿಗೆ ಕರೆ

- ಮಾತಾಜಿ

12ನೆಯ ಶತಮಾನದ ಮಹಾಮನೆಯಲ್ಲಿ ನಡೆದಂತಹ ದಾಸೋಹ ಸೇವೆಯನ್ನು ನೆನಪಿಸುವಂತೆ ಶರಣ ಮೇಳದ ದಾಸೋಹ ನಡೆಯಬೇಕು, ನಡೆಯುತ್ತಿದೆ. ಧರ್ಮಪಿತರ ಆದೇಶ ಹೀಗಿರುತ್ತದೆ.

ಭಕ್ತನು ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ।
ಲಕ್ಷ್ಯಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವನು. (ಬವ.ದೀ.248)


ಶರಣರು ಶರಣರನ್ನು ಭೇಟಿಯಾದಾಗ ಪರಸ್ಪರ ಉಪಚರಿಸಬೇಕು, ಸೇವೆ ಮಾಡಬೇಕು. ತಾನೇ ಶ್ರೇಷ್ಠ ಎಂಬ ಅಹಂಕಾರ ತಾಳಿ ಇನ್ನಿತರರು ಸೇವೆ ಮಾಡಲೆಂದು ನಿರೀಕ್ಷಿಸಬಾರದು. ಲಕ್ಷಗಾವುದ ದೂರವೇ ಇರಲಿ ಸಹ ಧರ್ಮೀಯ ಶರಣರನ್ನು ಕಾಣಲು ಹೋಗಬೇಕು. ಹಾಗೆ ಹೋದಾಗ ದಾಸೋಹಂ ಭಾವನೆಯಿಂದ ತನು ಸೇವೆ - ಮನ ಸೇವೆ- ಧನ ಸೇವೆ ಮಾಡಬೇಕು. ಅಂಥವರನ್ನು ಲಿಂಗದೇವ ಮೆಚ್ಚಿ ಒಲಿದು ಕೂಡುವನು. ಧರ್ಮಪಿತರ ಆದೇಶವನ್ನು ಪಾಲಿಸಲು ಇರುವ ಸೂಕ್ತ ಅವಕಾಶ ಶರಣ ಮೇಳ. ಅಲ್ಲಿ ದಾಸೋಹ ಮಾಡಲು ಅವಕಾಶ ಉಂಟು. ಒಬ್ಬೊಬ್ಬ ಶರಣ ಬಂಧುವನ್ನು ಭೇಟಿಯಾಗಲು ಬಹುದೂರ ಕ್ರಮಿಸಬೇಕಿಲ್ಲ. ಎಲ್ಲರೂ ಒಂದೇ ಕಡೆ ಸಿಗುತ್ತಾರೆ. ಜೊತೆಗೆ ಜ್ಞಾನ ದಾಸೋಹವೂ ಇರುತ್ತದೆ. ಆದ್ದರಿಂದ ಅಚ್ಚುಕಟ್ಟಾಗಿ ದಾಸೋಹವು ನಡೆಯಬೇಕಾದರೆ ಹೆಚ್ಚು ಜನ ಶರಣ ಬಂಧುಗಳು ಸ್ವಯಂ ಸೇವಕರಾಗಿ ದುಡಿಯಲು ಸಿದ್ಧರಾಗಬೇಕು. ಶರಣ ಮೇಳವೆಂಬ ತೌರಿನ ಹಬ್ಬಕ್ಕಾಗಿ ರಜೆಗಳನ್ನು, ಸಮಯವನ್ನು ಕಾಯ್ದಿರಿಸಿಕೊಳ್ಳಬೇಕು; ನೀಡಲು ಕಾಣಿಕೆಯನ್ನು ಹೊಂದಿಸಿ ಇಡಬೇಕು. ಶರಣ ಮೇಳ ಪೂರೈಸಿ ಹೋಗುತ್ತಲೇ ಹುಂಡಿಯೊಂದನ್ನು ಇಟ್ಟು ಕಾಣಿಕೆ ಸಂಗ್ರಹಿಸುತ್ತಲಿರ ಬೇಕು. ತಮ್ಮ ಇಷ್ಟಾರ್ಥಗಳು ಸಿದ್ಧಿಯಾದರೆ ಶರಣ ಮೇಳಕ್ಕೆ ಬಂದು ಸೇವಾ ಕಾರ್ಯಕ್ಕೆಗೊಳ್ಳುತ್ತೇವೆ ಎಂಬ ಹರಕೆಯನ್ನು ಮಾಡಿಕೊಳ್ಳಬೇಕು. ತನು ದಾಸೋಹಿಗಳು ಡಿಸೆಂಬರ್ 15ರಿಂದಲೇ ಬರಲು ಪ್ರಯತ್ನಿಸಬೇಕು. ಅತ್ಯಂತ ಹೆಚ್ಚಿನ ಜನರು ಕನಿಷ್ಠ ಜನವರಿ 1ರಿಂದಲಾದರೂ ಬಂದು ಸೇವಾ ಕಾರ್ಯದಲ್ಲಿ ತೊಡಗಬೇಕು. ಆರ್ಥಿಕವಾಗಿ ಅಶಕ್ತರಿದ್ದವರಿಗೆ ರಾಷ್ಟ್ರೀಯ ಬಸವ ದಳದವರು ಗಾಡಿ ಖರ್ಚು ಕೊಟ್ಟು ಕಳಿಸಿಕೊಡಬೇಕು. ಬುದ್ಧಿಜೀವಿಗಳಿಗೂ ಸಾಕಷ್ಟು ಕೆಲಸವಿರುತ್ತದೆ. ಶರಣೆಯರಿಗೂ ಸೇವಾ ಕಾರ್ಯ ಸಾಕಷ್ಟು ಇರುತ್ತದೆ. ಸಮಯವನ್ನು ಒದಗಿಸಿಕೊಂಡು ಬಂದು ಯಾರು ಬೇಕಾದರೂ ಸೇವೆ ಮಾಡಬಹುದು.

ಶರಣ ಮೇಳಕ್ಕೆ ಬಂದ ಶರಣರಿಗೆ ಮಾಡುವ ಉಪಚಾರ,
ಧರ್ಮಗುರು ಬಸವಣ್ಣನವರಿಗೆ ಮಾಡುವ ಉಪಚಾರ,
ಶರಣ ಮೇಳದ ವಿಸ್ತರಣೆಯಲ್ಲಿದೆ
ಬಸವ ಗುರುವಿನ ಕೀರ್ತಿ, ಲಿಂಗಾಯತ ಧರ್ಮದ ಮಹತಿ ।

ಎಂಬುದು ತಮ್ಮೆಲ್ಲರಲ್ಲಿ ಅಚ್ಚೊತ್ತಲಿ.

ಸಮಾವೇಶದ ಸಿಹಿ ಕ್ಷಣಗಳು





ಲಿಂಗಾಯತ ಧರ್ಮ ಮಹಾಸಭಾದ 22ನೆಯ ವಾರ್ಷಿಕೋತ್ಸವದ ಸಮಾವೇಶ


ಸಮಾವೇಶದ ಸಿಹಿ ಕ್ಷಣಗಳು







ಸಮಾವೇಶದ ಸಿಹಿ ಕ್ಷಣಗಳು





ಲಿಂಗಾಯತ ಧರ್ಮ ಮಹಾಸಭಾದ 22ನೆಯ ವಾರ್ಷಿಕೋತ್ಸವದ ಸಮಾವೇಶ

ಲಿಂಗಾಯತ ಧರ್ಮ ಮಹಾಸಭಾದ 22ನೆಯ ವಾರ್ಷಿಕೋತ್ಸವದ ಸಮಾವೇಶ

ಸಮಾವೇಶದ ಸಿಹಿ ಕ್ಷಣಗಳು





ಲಿಂಗಾಯತ ಧರ್ಮ ಮಹಾಸಭಾದ 22ನೆಯ ವಾರ್ಷಿಕೋತ್ಸವದ ಸಮಾವೇಶ

ದಾಸೋಹ

– ಮಾತೆ ಕಸ್ತೂರಿದೇವಿ

ದಾಸೋಹಿ ಬಸವಣ್ಣ ದಾಸೋಹ ಕಲಿಸಿದನು
ದೇಶದೇಶೆಲ್ಲ ಕೇಳುತಲಿ । ಹೊಸ ಮಾತ
ಮಾಸಿದವು ವೇದ ಹುಸಿಯೆಂದು ॥

–ಜನಪದ ಗೀತೆ

'ದಾಸೋಹ ' ಇತ್ತೀಚೆಗೆ ಈ ಶಬ್ಧ ಅಥವ ಮಾತು ಎಲ್ಲೆಲ್ಲೂ ಕೇಳಿ ಬರುತ್ತಿದೆ. ಜನಪ್ರಿಯವಾಗುತ್ತಿದೆ. ಮೊದಲು ಕೇವಲ ವಚನ ಸಾಹಿತ್ಯ ಮತ್ತು ಜನಪದ ಸಾಹಿತ್ಯ ಅಲ್ಲದೆ ಕೆಲವು ಮಠಮಾನ್ಯಗಳಲ್ಲಿ ಮಾತ್ರ ಹುದುಗಿಕೊಂಡಿದ್ದ ಈ ಮಾತನ್ನು ಈಗ ಎಲ್ಲರೂ ತಮ್ಮದನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಈ ಮಾತಿನ ನಿಜದರಿವು ವೇದ್ಯವಾಗದಿದ್ದರೂ ಚಿಂತೆಯಿಲ್ಲ, ಈ ಮಂತ್ರಕ್ಕೆ ಎಲ್ಲರೂ ಮಾರುಹೋಗುತ್ತಿದ್ದಾರೆ. ಅಂತೆಯೇ 'ದಾಸೋಹ'' ಎಂದರೆ ತಮ್ಮಲ್ಲಿರುವುದನ್ನು ಹಂಚುವುದು ಎಂಬ ಸೀಮಿತ ಅರ್ಥದಲ್ಲಿ ಗ್ರಹಿಸಿ ಅನ್ನ ದಾಸೋಹ, ಅಕ್ಷರ ದಾಸೋಹ, ಆರೋಗ್ಯ ದಾಸೋಹ, ವಿದ್ಯಾ ದಾಸೋಹ ಎಂದೆಲ್ಲ ತಮ್ಮ ಯೋಜನೆಗಳಿಗೆ ಹೆಸರಿಟ್ಟು ಕರೆದು ಸೇವಾಕಾರ್ಯವನ್ನು ವಿಸ್ತರಿಸಿಕೊಳ್ಳುತ್ತಿದ್ದಾರೆ.

ಬಸವ ಪೂರ್ವದಲ್ಲಿ **'ದಾಸೋಹ'** ಎಂಬ ಈ ಮಾತು ಬಳಕೆಯಲ್ಲಿ ಇರಲಿಲ್ಲ!? ನಂತರ ಬಸವ ಚಿಂತನೆಯ ಫಲವಾಗಿ ಕಾರ್ಯರೂಪಕ್ಕೆ ಬಂತು ಎಂದು ಮೇಲಿನ ತ್ರಿಪದಿಯಲ್ಲಿ ಜನಪದ ಕವಿಗಳು ಸತ್ಯಸಂಗತಿಯನ್ನು ಎದೆಗಾರಿಕೆಯಿಂದಲೇ ಪ್ರತಿಪಾದಿಸುತ್ತಿದ್ದಾರೆ.ಅಂತೆಯೇ ದಯೆ, ಮಾನವೀಯತೆ, ಸೇವೆಗಳ ಸಾಕಾರವಾಗಿದ್ದ ಗುರು ಬಸವಣ್ಣನವರು ಇದರ ಮಹತ್ವವನ್ನು ಜನರಿಗೆ ತಿಳಿಸಿದ್ದು ಮಾತ್ರವಲ್ಲದೆ ತಾವೂ ಇದೇ ದಾರಿಯಲ್ಲಿ ನಡೆದು ತೋರಿಸಿದರು ಮತ್ತು ಎಲ್ಲರಿಗೂ ಕಲಿಸಿದರು. ಈ ಮಾತಿಗೆ ಶೂನ್ಯ ಪೀಠಾಧೀಶರಾದ ಅಲ್ಲಮಪ್ರಭುದೇವರು ತಮ್ಮ ಒಂದು ವಚನದ ಮೂಲಕ ಹೀಗೆ ಪ್ರತ್ಯಕ್ಷ ಸಾಕ್ಷಿಯಾಗಿದ್ದಾರೆ.

"... ಶಿವಶರಣನ ಮನೆಯೊಳಗಿಪ್ಪ
ಶಿವ ಗಣಂಗಳ ತಿಂಥಿಣಿಯ ಕಂಡು
ಎನ್ನ ಮನ ಉಬ್ಬಿ ಕೊಬ್ಬಿ ಓಲಾಡುತ್ತಿದ್ದೇನಯ್ಯ
ನಮ್ಮ ಗುಹೇಶ್ವರನ ಶರಣ ಸಂಗನ ಬಸವಣ್ಣನ
ದಾಸೋಹದ ಘನವನೇನೆಂದೆನಬಹುದು
ನೋಡಾ ಸಿದ್ಧರಾಮಯ್ಯ!''

ಇದರ ಪರಿಣಾಮವಾಗಿಯೇ ಹನ್ನೆರಡನೆಯ ಶತಮಾನದಲ್ಲಿ ಗುರು ಬಸವಣ್ಣನವರ ಮಹಾಮನೆಯಲ್ಲಿ ನಿತ್ಯವೂ ಸಹಸ್ರಾರು ಜನರು ಗಣ ದಾಸೋಹದಿಂದ ಧನ್ಯರಾಗುತ್ತಿದ್ದುದು ಇತಿಹಾಸ ಪ್ರಸಿದ್ಧವಾಗಿದೆ.

ಈ ಹೊಸ ಮಾತನ್ನು ಎಲ್ಲಾ ದಿಕ್ಕುಗಳಿಗೂ, ದೇಶ ವಿದೇಶಗಳಿಗೂ ಎಲ್ಲ ಜನರು ಕೇಳುವಂತೆ ತಿಳಿಸಿದರು, ಕಲಿಸಿದರು, ಪ್ರಚಾರ ಮಾಡಿದರು. ಇದರ ಪ್ರಭಾವದಿಂದಾಗಿ ವೇದ, ಶಾಸ್ತ್ರ ಪುರಾಣಗಳ, ಗುಟ್ಟು ಬಯಲಾಗಿ ಬಸವಾದಿ ಪ್ರಮಥರ ವಚನಗಳು, ಆಚಾರ ವಿಚಾರಗಳು ಮೇಲುಗೈ ಸಾಧಿಸಿದವು. ಇದರುವರೆಗೂ ತಿಳಿದವರು, ಬಲ್ಲಿದರು, ಅತಿ ಶ್ರೇಷ್ಠರು ಎಂಬ ಭ್ರಮೆ ತುಂಬಿಕೊಂಡಿದ್ದ ಜನರು ವೇದಗಳನ್ನು ಮುಂದಿಟ್ಟುಕೊಂಡು, ಮೇಲು ಕೀಳು ಎಂದು ವಿಭಜಿಸಿ ಜನ ಸಾಮಾನ್ಯರನ್ನು ಧರ್ಮ, ಜ್ಞಾನ, ಸಂಸ್ಕಾರ ವಂಚಿತರನ್ನಾಗಿ ಮಾಡಿ ಶೋಷಿಸುತ್ತಿದ್ದರು. ಇದರಿಂದ ಸಮಾಜದ ಒಂದಂಗವಾಗಿದ್ದ ಬೃಹತ್ ಜನಾಂಗವು ಅಜ್ಞಾನ, ಅಸಹಾಯಕತೆ, ಮೌಢ್ಯತೆಗಳಿಂದ ನಲುಗಬೇಕಾಯಿತು. ಗುರು ಬಸವಣ್ಣನವರು ಬಂದ ಮೇಲೆ ಕಾಯಕ-ದಾಸೋಹ-ಪ್ರಸಾದ ಎಂಬ ಪರಸ್ಪರ ಅವಲಂಬಿತವಾದ ತ್ರಿತತ್ವಗಳನ್ನು ಕೊಟ್ಟು ಅಸತ್ಯದ ಕೂಪದಲ್ಲಿದ್ದ ಜನರನ್ನು ಮೇಲೆತ್ತಿದ್ದರು. ರಕ್ಷಿಸಿದರು. ಜಾತಿವರ್ಗ ವರ್ಣರಹಿತ ಧರ್ಮಸಹಿತವಾದ ಸಂರಕ್ಷಣೆ ಮತ್ತು ಸುಭದ್ರತೆಯ ಚೌಕಟ್ಟನಲ್ಲಿ ವ್ಯವಸ್ಥಿತವಾಗಿ ಬದುಕುವುದನ್ನು ಕಲಿಸಿದರು. ಅದಕ್ಕಾಗಿಯೇ ಜನಪದರು, ಹೃದಯ ತುಂಬಿ ಬೌದ್ಧಿಕ ಪ್ರಾಮಾಣಿಕತೆಯಿಂದ ಗುರು ಬಸವಣ್ಣನವರನ್ನು ಕೊಂಡಾಡುತ್ತಿದ್ದಾರೆ.

ಇದುವರೆಗೂ ದಾಸೋಹದ ಪರಿಕಲ್ಪನೆ ಕೊಟ್ಟ ಮೂಲ ಕರ್ತೃಗಳು ಗುರು ಬಸವಣ್ಣನವರು ಎಂಬುದನ್ನು ಅರಿತೆವು. ಇನ್ನು ಮುಂದೆ ದಾಸೋಹದ ಮಹತ್ವ, ಅರ್ಥವ್ಯಾಪ್ತಿಯನ್ನು ಬಸವಾದಿ ಪ್ರಮಥರ ವಚನಗಳ ಮೂಲಕ ಗ್ರಹಿಸಲು ಪ್ರಯತ್ನಿಸೋಣ.

ಇಹಪರದ ಮುಕ್ತಿಗೆ ಸಾಧನವಾದ, ಜೀವಂತ ಸಾಹಿತ್ಯ ಎಂದೆನಿಸಿದ ವಚನ ಶಾಸ್ತ್ರದ ಅಧ್ಯಯನ, ಚಿಂತನ, ಅನುಷ್ಠಾನ, ಪ್ರಸರಣಗಳನ್ನೇ ತಮ್ಮ ಉಸಿರನ್ನಾಗಿ ಮಾಡಿಕೊಂಡು ಬದುಕುತ್ತಿರುವ ಪೂಜ್ಯಶ್ರೀ ಮಹಾ ಜಗದ್ಗುರು ಮಾತೆ ಮಹಾದೇವಿ ತಾಯಿಯವರ ಅನುಭವದಲ್ಲಿ ಹೇಳುವುದಾದರೆ "ದಾಸೋಹಂ ಎಂದರೆ ಅಹಂ ದಾಸಃ" ಎಂದು ಅರ್ಥವಾಗುತ್ತದೆ. ಇದರ ವಾಚ್ಯಾರ್ಥ ನಾನು ದಾಸ, ಸೇವಕ, ಕಿಂಕರ ಎಂಬ ಭೃತ್ಯಭಾವವಾದರೂ ಸಹ ಇದರ ಲಕ್ಷ್ಯಾರ್ಥ ಬಹು ಆಳವಾಗಿದೆ. ಕಾಯಕ ಸಿದ್ಧಾಂತದ ಪೂರ್ವಾರ್ಥ ಗಳಿಕೆಯ ಬಗೆಯನ್ನು ತಿಳಿಸಿದರೆ ಉತ್ತರಾರ್ಥ ಬಳಕೆಯನ್ನು ಕುರಿತು ಹೇಳುತ್ತದೆ. ಅದುವೆ ದಾಸೋಹ. ದಾಸೋಹವೆಂದರೆ ಯಾರಿಗಾದರೂ ಉಣ್ಣಿಸುವುದು ಮಾತ್ರವಲ್ಲ. ಅದು ಒಂದು ತಾತ್ವಿಕ ಆಚರಣೆ, ಸತ್ಯತೆ, ಶುದ್ಧತೆ, ದೈವೀ ಶರಣಾಗತಿಗಳಿಂದ ಕೂಡಿದ ದುಡಿಮೆ ಕಾಯಕದ್ದಾದರೆ ಆ ರೀತಿ ಗಳಿಸಿದ ಅರ್ಥವನ್ನು ದಾಸೋಹದ ಮೂಲಕ ವಿನಿಯೋಗ ಮಾಡುತ್ತಿದ್ದರೆ ಮಾತ್ರ ಅಂಥ ವ್ಯಕ್ತಿ ಗಳಿಕೆಗಾಗಿ ಮಾಡಿದುದು ಕಾಯಕ, ದಾಸೋಹವಿಲ್ಲದ ಕಾಯಕ, ದಾಸೋಹವಾಗದು; ಕಾಯಕವಿಲ್ಲದೆ ಗಳಿಸಿದಾಗ ಮಾಡುವ ದಾನವು ದಾಸೋಹವಾಗದು. ಕಾಯಕ-ದಾಸೋಹಗಳ ಜತೆಗೆ ಸೇರುವ ಮತ್ತೊಂದು ತತ್ವ ಪ್ರಸಾದ-ವ್ಯವಹಾರಿಕ ಅರ್ಥದಲ್ಲಿ ಊಟ. ಸತ್ಯ ಶುದ್ಧ ಕಾಯಕದಿಂದ ಗಳಿಸಿ ಮಿತವಾದ, ಸರಳವಾದ ಅಗತ್ಯಗಳನ್ನು ಇಟ್ಟುಕೊಂಡು ತನಗೆ ಬಳಸಿ, ಉಳಿದುದನ್ನು ಸಮಾಜದ ಶ್ರೇಯಸ್ಸಿಗೆ ದಾಸೋಹದ ಮೂಲಕ ಬಳಸಿದಾಗ ಮಾತ್ರ ತಾನುಣ್ಣುವ ಊಟ ಪ್ರಸಾದವಾಗುತ್ತದೆ. ಕಾಯಕದಿಂದ ಗಳಿಸದೆ ಉಂಡರು ಅದು ಪ್ರಸಾದವಲ್ಲ; ದಾಸೋಹದ ಮೂಲಕ ಸಲ್ಲಿಸದೆ ಉಂಡರು ಅದು ಪ್ರಸಾದವಲ್ಲ".

ಮಹಾನ್ ಶರಣೆಯರು

ಕಾಯಕ ನಿಷ್ಠೆಯ ಕೊಟ್ಟಣದ ಸೋಮವ್ವೆ

ಶ್ರೀಧರ ಗೌಡರ
ವರದಿಗಾರರು, ಕೂಡಲಸಂಗಮ

ಕಾಯಕದಲ್ಲಿ ಮೇಲು ಕೀಳೆಂಬುದಿಲ್ಲ. ಯಾವ ಕಾಯಕವಾದರೂ ಒಂದೇ. ಕಾಯಕವೇ ಕೈಲಾಸ. ಇಂತಹ ಕೈಲಾಸ ಸದೃಶ್ಯವಾದ ಕಾಯಕವನ್ನು ಕೈಗೊಂಡು ಕಾಯಕದಿಂದಲೇ ಮುಕ್ತಿ ಹೊಂದ ಬಯಸಿದವಳು ಕೊಟ್ಟಣದ ಸೋಮವ್ವೆ.

ಸೋಮವ್ವೆಯು ಕ್ರಿಶ 1160ರಲ್ಲಿ ಬದುಕಿದ್ದಳು ಎಂದು ಕರ್ನಾಟಕ ಕವಿ ಚರಿತ್ರೆಕಾರರು ಹಾಗೂ ಕನ್ನಡ ಸಾಹಿತ್ಯ ಚರಿತ್ರೆಕಾರರು ಅಭಿಪ್ರಾಯಪಟ್ಟಿದ್ದಾರೆ. ಈಕೆಯು ಕಲ್ಯಾಣ ಪಟ್ಟಣದಲ್ಲಿ ಕೊಟ್ಟಣದ ಕಾಯಕವನ್ನು ಕೈಗೊಂಡಿದೆಳೆಂಬುದು ತಿಳಿದುಬರುತ್ತದೆ. ಕೊಟ್ಟಣ ಕುಟ್ಟುವುದೆಂದರೆ ಭತ್ತವನ್ನು ಕುಟ್ಟಿ ಅಕ್ಕಿಯನ್ನು ಮಾಡಿಕೊಡುವ ಕಾಯಕ. ಇಂತಹ ಕಾಯಕವನ್ನು ಕೈಗೊಂಡು ಇದರಿಂದ ಬಂದ ದ್ರವ್ಯದಲ್ಲಿ ಗುರು-ಲಿಂಗ-ಜಂಗಮದ ಸೇವೆ ಮಾಡುತ್ತ ದಸೋಹ ನಿರತಳಾಗಿದ್ದಳು. ಈಕೆಯ ವೈಯಕ್ತಿಕ ಬದುಕಿನ ಬಗಗೆ ಯಾವುದೆ ಆಧಾರ ಪೂರಿತವಾದ ಸಂಗತಿಗಳು ದೊರಕಿಲ್ಲ. ಬಸವಾದಿ ವಚನಕಾರರ ಸಮೂಹದಲ್ಲಿ ಸೇರಿ ಈಕೆಯೂ ಅನುಭವ ಮಂಟಪದ ಕಾರ್ಯಕ್ರಮಗಳಲ್ಲಿ ಪಾಲಗೊಂಡಿದ್ದಳು.ಇವಳದಾದ ಒಂದು ವಚನ ದೊರಕಿದೆ.

ಈಕೆಯ ವಚನದ ಅಂಕಿತ ನಿರ್ಲಜ್ಜೇಶ್ವರಾ ಎಂದಾಗಿದೆ. ಈಕೆಯು ನಿರ್ಲಜ್ಜ ಶಾಂತಯ್ಯನ ಶಿಷ್ಯಳೆಂಬುದು ಶಿವಶರಣ ಕಥಾರತ್ನ ಕೋಶ ಮತ್ತು ಶಿವಶರಣೆಯ ಚರಿತ್ರೆಗಳು ಎಂಬ ಗ್ರಂಥಗಳಿಂದ ತಿಳಿದು ಬರುತ್ತದೆ. ಕೈಗೊಂಡ ಕಾಯಕವನ್ನು ಎಂತಹ ನಿಷ್ಠೆಯಿಂದ ಈಕೆ ಮಾಡುತ್ತಿದ್ದಳೆಂಬುದಕ್ಕೆ ಅವಳ ವಚನವೇ ಸಾಕ್ಷಿಯಾಗಿದೆ.

ಹದತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ
ವ್ರತಹೀನನ ನೆರೆಯ ನರಕವಲ್ಲದೆ ಮುಕ್ತಿಯಿಲ್ಲ.
ಅರಿಯದುದು ಹೋಗಲಿ, ಅರಿದು ಬೆರೆದೆನಾದಡೆ
ಕಾದ ಕತ್ತಿಯಲ್ಲಿ ಕಿವಿಯ ಕೊಯ್ವರಯ್ಯಾ
ಒಲ್ಲೆ ಬಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರ.

ತನ್ನ ಕಾಯಕದ ವೃತ್ತಿಯನ್ನು ಸೂಚಿಸುವ ಪದಗಳನ್ನು ಬಳಸಿ ಭತ್ತ ಕುಟ್ಟುವ ಹದದಂತೆ, ಬದುಕಿಗೂ ಒಂದು ಹದ ಬೇಕು. ಅಂತಹ ಹದ ವ್ರತದಿಂದ ಬರುತ್ತದೆ. ಹದ ತಪ್ಪಿದರೆ ಅಕ್ಕಿ ನುಚ್ಚಾಗುವಂತೆ, ತೂಕ ತಪ್ಪಿದ ಬದುಕು ಮೂರಾಬಟ್ಟೆಯಾಗುತ್ತದೆ ಎಂದು ಎಚ್ಚರಿಸುವ ಮೂಲಕ ಜೀವನ ದರ್ಶನ ಮಾಡಿಸಿದ್ದಾಳೆ.

ಕೊಟ್ಟಣದ ಸೋಮಮ್ಮ ತನ್ನ ಕಾಯಕದಿಂದ ಸತ್ಯ ಶುದ್ಧ ಜೀವನ ಮಾಡಿ, ದಾಸೋಹ ಮಾಡುತ್ತಿದ್ದ ಆದರ್ಶ ಶರಣೆ, ತನ್ನ ಕಾಯಕವನ್ನು ಅತ್ಯಂತ ಭಕ್ತಿ, ಶ್ರದ್ದೆಗಳಿಂದ ಮಾಡಿ ದಾಸೋಹ ವ್ರತ ಕೈಗೊಂಡ ಶರಣೆ ಸೋಮಮ್ಮ,

ಕಾಯಕದಲ್ಲಿ ತನ್ಮಯತೆ, ಪ್ರಾಮಾಣಿಕತೆ ಇರಬೇಕು.ಹದ ತಪ್ಪಿ ಕುಟ್ಟಿದರೆ ಅಕ್ಕಿಯ ಬದಲಾಗಿ ನುಚ್ಚು ದೊರೆಯುತ್ತದೆ.ವ್ರತ ಹೀನರಿಂದ ದೂರ ಇರಬೇಕು ಎಂದು ಜೀವನದಲ್ಲಿ ವ್ರತದ ಮಹತ್ವವನ್ನು ತಿಳಿಸಿದ್ದಾಳೆ. ತಿಳಿಯದೆ ವ್ರತಹೀನರ ಸ್ನೇಹವಾದರೆ ಕ್ಷಮೆ ಇದೆ. ಆದರೆ ತಿಳಿದೂ ಅಂತಹವರ ಸ್ನೇಹ ಬೆಳೆಸಿದರೆ ಅದು ಮಹಾ ಪಾಪಕರ ಅರಿದು ಬೆರೆದವರ ಕಿವಿ, ಮೂಗು ಕಾದಕತ್ತಿಯಿಂದ ಕೊಯ್ಯುವರು ಆದ್ದರಿಂದ ವ್ರತಹೀನರನ್ನು ತಾನೆಂದಿಗೂ ಸೇರಲಾರೆ ಎಂದಿದ್ದಾಳೆ ಕೊಟ್ಟಣದ ಸೋಮಮ್ಮ. ಇದೇ ಅಭಿಪ್ರಾಯವನ್ನು ಜಾನದಪ ಕವಿಯಾದ ಸರ್ವಜ್ಞನ ಮಾತಿನಲ್ಲಿ ಹೇಳುವುದಾದರೆ

ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ
ದುರ್ಜನರ ಸಂಗವದು ಬಚ್ಚಲಿನ ರೊಚ್ಚೆಯಂತಕ್ಕು ಸರ್ವಜ್ಞ

ಸಜ್ಜನರ ಸಂಗವು ಹಿತಕಾರಿಯಾದುದು. ಅದೇ ದುರ್ಜನನ ಒಡನಾಟ ಬಚ್ಚಲಿನ ರೊಚ್ಚೆಯಂತೆ ದುರ್ಗಂಧದಾಯಕ. ಆದುದರಿಂದ ಇಂತಹ ಸಹವಾಸ ಸಲ್ಲದು ಇದನ್ನು ತಾನು ಅರಿತಿರುವುದರಿಂದಲೇ ವ್ರತಹೀನರ ಸಹವಾಸಕ್ಕೆ ಹೋಗದೆ,ಮೋಕ್ಷ ಮಾರ್ಗದರ್ಶಿಗಳಾದ ಶರಣ ಸಹವಾಸವನ್ನು ಮಾಡಿದಳು.

ತನ್ನ ಒಂದೇ ಒಂದು ವಚನದ ಮೂಲಕ ಕೊಟ್ಟಣದ ಸೋಮವ್ವೆ ತಾನು ಕೈಗೊಂಡ ಕಾಯಕಕ್ಕೆ ಸಂಬಂಧಪಟ್ಟ ದೃಷ್ಟಾಂತವನ್ನು ಕೊಟ್ಟು ವ್ರತನಿಷ್ಠೆಯನ್ನು ಎತ್ತಿಹಿಡಿದಿದ್ದಾಳೆ.

ಅರಿವು-ಆಚಾರ, ಜ್ಞಾನ-ಕ್ರಿಯೆ ಇವುಗಳ ಸಮನ್ವಯವೇ ಮಾನವನ ಬದುಕಿನ ಮಹತ್ವದ ಅಂಶ ಎಂಬುದನ್ನು ತಿಳಿಸಿ ಅದರಂತೆ ನುಡಿದು ತಾನೂ ನಡೆದು ತೋರಿದ್ದಾಳೆ. ಜ್ಞಾನಿಯಾಗಿ ತನ್ನ ನಿಜದರಿವನ್ನು ನಿಜಾಚರಣೆಯಲ್ಲಿ ತರಲಾಗದಿದ್ದರೆ ಅಂತಹ ವ್ಯಕ್ತಿಯ ಕಿವಿಯನ್ನೇ ಕಾದ ಕತ್ತಿಯಲ್ಲಿ ಕೊಯ್ವರು ಎನ್ನುವಲ್ಲಿ ತಪ್ಪಿ ನಡೆದದ್ದಾದರೆ ಆಗುವ ಪರಿಣಾಮವನ್ನು ಒತ್ತಿ ಹೇಳಿ ಮಾನವರನ್ನು ಎಚ್ಚರಿಸಿ ಅದರಂತೆ ನಡೆದ ಪುಣ್ಯಸ್ತ್ರೀ ಕೊಟ್ಟಣದ ಕಾಳವ್ವೆ

ಕಾಯಕ ನಿಷ್ಠೆಯ ಗೊಗ್ಗವ್ವೆ

ಶಿವಭಕ್ತರಿಗೆ ಧೂಪ ಅರ್ಪಿಸುವ ಕಾಯಕದ ಮೂಲಕ ಪ್ರಸಿದ್ಧಳಾದ್ದವಳೇ ಧೂಪದ ಗೊಗ್ಗವ್ವೆ. ಕೇರಳದ ಅವಲೂರು ಈಕೆಯ ಸ್ಥಳ. ಕಾಲ 1160 ಆಗಿದ್ದು ಧೂಪದ ಕಾಯಕದವಳಾದುದರಿಂದ ಧೂಪದ ಗೊಗ್ಗವ್ವೆ ಎಂದೂ ಪ್ರಸಿದ್ಧಳಾಗಿದ್ದಾಳೆ.

ಶಿವ ಮೋಹಿತಳಾದ ಈಕೆ ಲೌಕಿಕ ಮದುವೆಯನ್ನು ನಿರಾಕರಿಸಿ ವಿರಾಗಿಣಿಯಾಗಿ ಕಲ್ಯಾಣಕ್ಕೆ ಬರುತ್ತಾಳೆ. ನಾಸ್ತನಾಥ ಅಂಕಿತದಲ್ಲಿ 6 ವಚನಗಳನ್ನು ರಚಿಸಿದ್ದಾಳೆ.

ಗೊಗ್ಗವೆಗೆ ಸಂಬಂಧಿಸಿದ ಕೆಲವು ಸಂಗತಿಗಳು ಭೈರವೇಶ್ವರಕಾವ್ಯ, ಗುರುರಾಜಚಾರಿತ್ರ, ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ ಮೊದಲಾದ ಕೃತಿಗಳಲ್ಲಿ ಉಕ್ತವಾಗಿದೆ. ಅವುಕಗಳ ಪ್ರಕಾರ ಈಕೆಯ ಸ್ಥಳ ಕೇರಳದ ಅವಲೂರು. ಶಿವಭಕ್ತ ದಂಪತಿಗಳ ಉದರದಲ್ಲಿ ಜನಿಸಿದ ಈಕೆ ಬಾಲ್ಯದಿಂದಲೇ ವೈರಾಗ್ಯತಾಳಿ, ಶಿವಭಕ್ತಿಯನ್ನು ಮೈಗೂಡಿಸಿಕೊಂಡಿದ್ದಳು. ವಯಸ್ಸಿಗೆ ಬರಲು ತಂದೆ ತಾಯಿಗಳು ಮದುವೆ ಮಾಡಲುಮಾಡಬೇಕೆಂದು ವಿಚಾರಿಸಿದಾಗ,ಮನೆಯಿಂದ ಓಡಿಹೋಗಿ ಶಿವಾಲಯದಲ್ಲಿ ಅಡಗಿಕೊಂಡಳು. ಆಗ ಅವಳ ಮನದಿಂಗಿತ ಅರಿತ ತಂದೆ ತಾಯಿಗಳು ಒತ್ತಾಯ ಮಾಡದೆ ಅವಳ ಇಚ್ಚೆಯಂತೆ ಇರಲು ಬಿಡುತ್ತಾರೆ

ಗೊಗ್ಗವ್ವೆ ಧೂಪ ಅರ್ಪಿಸುವ ಕಾಯಕ ಕೈಗೊಂಡು ಶಿವಪೂಜೆಯಲ್ಲಿ ತೊಡಗುತ್ತಾಳೆ. ಒಮ್ಮೆ ಶಿವ ಇವಳ ನಿಷ್ಠೆ ಪರೀಕ್ಷಿಸಲು ಸ್ಪುರದ್ರೂಪಿ ಯುವಕನ ವೇಷದಲ್ಲಿ ಕಾಣಿಸಿಕೊಂಡು ತನ್ನನ್ನು ಮದುವೆಯಾಗಲು ಒತ್ತಾಯಿಸುತ್ತಾನೆ. ಅದಕ್ಕೊಪ್ಪದ ಗೊಗ್ಗವ್ವೆ ತನ್ನ ಭಕ್ತಿಯ ಮೂಲಕ ಶಿವನ ಒಲುಮೆಗೆ ಪಾತ್ರಳಾಗುತ್ತಾಳೆ. ಸ್ವತ: ಶಿವನೆ ಗುರುವಾಗಿ ದೀಕ್ಷೆಕೊಟ್ಟು ಶಿವಭಕ್ತರಿಗೆ ಧೂಪವನ್ನರ್ಪಿಸುತ್ತ ಜೀವನ ಸಾಗಿಸು ಎಂದು ಹೇಳುತ್ತಾನೆ. ಅಂದಿನಂದ ಆಕೆ ಧೂಪದ ಕಾಯಕವನ್ನು ನಿಷ್ಠೆಯಿಂದ ಮಾಡುತ್ತಾ ಮುನ್ನಡೆಯುತ್ತಾಳೆ.

ಒಮ್ಮೆ ಕೊಡುಗಲೂರ ದೊರೆ ಚೇರಮರಾಯ ಕೈಲಾಸದ ದಾರಿ ಹುಡುಕುತ್ತ ಹೊರಟಾಗ ಅವನಿಗೆ ಧೂಪದ ಹೊಗೆಯ ಮೂಲಕ ದಾರಿ ತೋರಿಸುತ್ತಾಳೆ.ಹೀಗೆ ನಿಷ್ಠೆಯಿಂದ ಕಾಯಕ ಮಾಡುತ್ತ ತನ್ನಿಷ್ಟಲಿಂಘ ನಾಸ್ತಿನಾಥನಲ್ಲಿ ಐಕ್ಯಳಾಗುತ್ತಾಳೆ. ಇದನ್ನು ಸಿದ್ದನಂಜೇಶ ಸಂಕ್ಷಿಪ್ತವಾಗಿ ಭವರಹಿತೆ ಧೂಪದಾ ಗೊಗ್ಗವ್ವೆಯೆಂಬಾಕೆ ಶಿವಗೆ ಧೂಪವ ನೀಡಿ ಕೈಲಾಸಪದವನುಂ ಶಿವಭಕ್ತರಿಗೆ ತೋರಿ ಶಂಕರನ ಕೃಪೆ ಪಡೆದಳ್ ಎಂದು ಹೇಳುತ್ತಾನೆ.

ಗೊಗ್ಗವ್ವೆಯ ಕಾಲ ಕ್ರಿ.ಶ. 1160 ಎಂದು ಮೊದಲು ಹೇಳಿದ ಡಾ.ಸರೋಜಿನಿ ಮಹಿಷಿಯವರು ನಂತರ ಗೊಗ್ಗವ್ವೆಯ ಹೆಸರು ಗಣ ಸಹಸ್ರಗಳಲ್ಲಿ ಬಂದಿದೆ.ಪುರಾತನರಲ್ಲಿಯೂ ಅವಳ ಗಣನೆಯಿದೆ. ಬಸವಣ್ಣ ತನ್ನ ವಚನಗಳಲ್ಲಿ ಚೇರಮರಾಯನನ್ನು ಹೊಗಳಿರುವುದರಿಂದ ನಂಬಿಯಣ,ಚೇರಮರಾಯ, ಗೊಗ್ಗವ್ವೆ ಇವರೆಲ್ಲ ಬಸವಣ್ಣನವರಿಗಿಂತ ಹಿಂದಿನವರಾಗಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.ಈ ಅಭಿಪ್ರಾಯ ದೃಢ ಪಡುವದಾದರೆ ಗೊಗ್ಗವ್ವೆ ನಂಬಿಯಣ್ಣನ ಸಮಕಾಲೀನಳೆಂದು ಹೇಳಬೇಕಾಗುತ್ತದೆ. ಶಾಸನಾಧಾರಗಳನ್ನು ಕೊಡುತ್ತ ಡಾ.ಎಂ.ಎಂ.ಕಲಬುರ್ಗಿಯವರು ನಂಬಿಯಣ್ಣ ಹೆಸರಿನಲ್ಲಿ ಇಬ್ಬರು ಶರಣರು ಸೌಂದರ ನಂಬಿ, ಕಡವಲ ನಂಬಿ ಇದ್ದು ಅವರೀರ್ವರೂ ಅರವತ್ಮೂರು ಪುರಾತನರಲ್ಲಿ ಬರುವ ಕೊನೆಯ ಶರಣರು, ಗೊಗ್ಗವೆ

ನಂಬಿಯಣ್ಣನ ಸಮಕಾಲೀನೆ ಎನ್ನುವದಾದರೆ, ಆಕೆಯ ಹೆಸರು ಅರವತ್ಮೂರು ಪುರಾತನರಲ್ಲಿ ಸೇರಿಸಬೇಕಾಗುತ್ತದೆ ಎಂದಿದ್ದಾರೆ.

ನಂಜುಂಡದೇವ ಪುರಾತನರ ಹೆಸರುಗಳೊಂದಿಗೆ ಬಸವಣ್ಣನವರ ಸಮಕಾಲೀನರಾದ ಶರಣರ ಹೆಸರನ್ನೂ ಸೇರಿಸಿ,ಅಲ್ಲಿ ಗೊಗ್ಗವ್ವೆಯ ಹೆಸರನ್ನೂ ಪ್ರಸ್ತಾಪಿಸಿ, ಒಂದು ಸ್ತುತಿಪರ ಪದ್ಯದಲ್ಲಿ, ಹೀಗೆ ಹೇಳಿಕೊಂಡು ಹೋಗುತ್ತಾನೆ.

ಕಲಿಯನಾರ್ ಶರಣನೋ
ಹಿಲಗುಪ್ತ ಮಂಚಣ್ಣ
ನಲಘು ಮಾಚಯ್ಯ ಗೊಗ್ಗವ್ವೆ
ಗಳ ಪಾಡುತಾಗ... ..

ಇಲ್ಲಿ ಕಲಿಯನಾರ್, ಓಹಿಲರಂಥ ಪುರಾತನರು, ಮಂಚಣ್ಣ, ಮಾಚಯ್ಯರಂಥ ಬಸವಣ್ಣನವರ ಸಮಕಾಲೀನ ಶರಣರ ಪ್ರಸ್ತಾಪವಿದ್ದು, ಅಲ್ಲಿ ಗೊಗ್ಗವ್ವೆಯ ಉಲ್ಲೇಖವೂ ಬಂದಿದೆ.

ಪಾಲ್ಗುರಿಕೆ ಸೋಮನಾಥ ತನ್ನ ಪಂಡಿತಾರಾಧ್ಯ ಚರಿತೆಯಲ್ಲಿ ಬಸವಾದಿ ಪ್ರಮಥರ ಪಂಕ್ತಿಯಲ್ಲಿ ಗೊಗ್ಗವ್ವೆಯನ್ನು ಹೆಸರಿಸಿದ್ದಾನೆ.

ಗೊಗ್ಗವ್ವೆ ನಾಸ್ತನಾಥ ಅಂಕಿತದಲ್ಲಿ 6 ವಚನಗಳನ್ನು ರಚಿಸಿದ್ದು ವಚನಗಳಲ್ಲಿ ಶಿವಾನುಭವದ ತತ್ವ, ಪರಮಾತ್ಮನನ್ನು ಅರಿಯುವದಕ್ಕೆ ಅರ್ಚನೆ,ಪೂಜೆಗಳಂತ ಸಾಧನೆ ಅವಶ್ಯ ಅದು ಸತ್ಯದಿಂದೊಡಗೂಡಿರಬೇಕು ಎಂಬುದನ್ನು ವ್ಯಕ್ತಪಡಿಸುವುದರ ಜೋತೆಗೆ ಲಿಂಗಾಂಗ ಸಾಮರಸ್ಯ, ಸ್ತ್ರೀ-ಪುರುಷ ಸಮಾನತೆಯ ಚಿಂತನೆಗೆ ಆದ್ಯತೆ ನೀಡಿದ್ದಾಳೆ.

ಹೆಣ್ಣು ಗಂಡಿನ ಸಮಾನತೆ ಮಹತ್ವ

ಮೊಲೆ ಮುಡಿ ಬಂದಡೆ ಹೆಣ್ಣೆಂಬರು,
ಮೀಸೆಕಾಸೆ ಬಂದಡೆ ಗಂಡೆಂಬರು,
ಈ ಉಭಯವ ಜ್ಞಾನ ಹೆಣ್ಣೋ ಗಂಡೋ ನಾಸ್ತಿನಾಥಾ.

ಈ ವಚನದಲ್ಲಿ ಹೆಣ್ಣು ಗಂಡು ಬೇದವಿಲ್ಲವೆಂದು ತಿಳಿಸುತ್ತಾಳೆ, ತನ್ನ ಮೊತ್ತೊಂದು ವಚನದಲ್ಲಿ

ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಅದು ಒಬ್ಬರ ಒಡವೆ ಎಂದು ಅರಿಯಬೇಕು.
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವುದೆಂದರಿಯಬೇಕು.
ಈ ಎರಡು ಉಭಯವ ಕಳೆದು, ಸುಖ ತಾನಾಗಬಲ್ಲಡೆ
ನಾಸ್ತಿನಾಥನು ಪರಿಪೂರ್ಣನೆಂಬೆ.

ಅನಾದಿಕಾಲದಿಂದಲೂ ಹೆಣ್ಣನ್ನು ಒಂದು ಒಡವೆಯೆಂದು ತಿಳಿಯುತ್ತಾ ಬಂದಿದ್ದ ಪುರುಷ ಪ್ರಧಾನ ಸಮಾಜದ ಸ್ಥಾಪಿಯ ಮೌಲ್ಯಗಳನ್ನು ಧಿಕ್ಕರಿಸುತ್ತಾಳೆ. ಮೋಹ ಗಂಡಿಗೆ ಮಾತ್ರ ಸೀಮಿತವಾದದ್ದಲ್ಲ ಮೋಹಿಸುವ ಕ್ರಿಯೆ ಗಂಡಿಗೂ ಹೆಣ್ಣಿಗೂ ಸಮಾನವಾದ್ದು. ಸ್ತ್ರೀ,ಪುರುಷರು ಸಮಾನರು,ಯಾರು ಮೇಲಿಲ್ಲ,ಕೀಳೂ ಇಲ್ಲ ಎಂಬ ವಾಸ್ತವ ಸತ್ಯವನ್ನು ವಚನಗಳ ಮೂಲಕ ವ್ಯಕ್ತಪಡಿಸಿದ್ದಾಳೆ.

ಭಕ್ತಿಯ ಮಹತ್ವ

ಉದ್ದವನೇರುವುದಕ್ಕೆ ಗದ್ದುಗೆಯಿಲ್ಲದೆ ಎಯ್ದಬಾರದು
ಚಿದ್ರೂಪನನರಿವುದಕ್ಕೆ ಅರ್ಚನೆ ಪೂಜನೆ
ನಿತ್ಯನೇಮವಿಲ್ಲದೆ ಕಾಣಬಾರದು
ಅಸತ್ಯದಿಂದ ಮಾಡಿ ಅಸತ್ಯವ ಮರದಡೆ
ಇದೇ ಸತ್ಯವೆಂದೆ ನಾಸ್ತಿನಾಥ

ಚಿದ್ರೂಪನಾದ ಶಿವನನ್ನು ಅರ್ಚನೆ,ಪೂಜನೆ,ನಿತ್ಯ ನೇಮಗಳನ್ನು ಸತ್ಯದಿಂದ ಭಕ್ತಿ ಶ್ರದ್ಧೆಯಿಂದ ಮಾಡಿ ಅರಿಯಬೇಕು.ಹಾಗಿಲ್ಲದೆ ಅವನ ಸಾಕ್ಷಾತ್ಕಾರ ಸಾಧ್ಯವಿಲ್ಲ.ಹಾಗೆ ಅರಿತು ಬೆರೆತ ಮೇಲೆ ಅಂಗಲಿಂಗವೆಂಬ ಭೇದ ಇಲ್ಲವಾಗುತ್ತದೆ.

ಲಿಂಗಭೇದ ಇಲ್ಲ

ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದಡೆ ಗಂಡೆಬರು
ಈ ಉಭಯದ ಜ್ಞಾನ ಹೆಣ್ಣೋ ಗಂಡೋ !

ದೇವರ ದಾಸಿಮಯ್ಯನ ವಚನವನ್ನು ಹೋಲುತ್ತದೆ. ಇಂತಹಹುದೇ ವಚನ ಅಂಬಿಗರ ಚೌಡಯ್ಯ ಮತ್ತು ಸತ್ಯಕ್ಕರಲ್ಲೂ ಉಂಡು. ಹೆಣ್ಣು ಗಂಡುಗಳ ನಡುವೆ ಸುಳಿಯುವ ಆತ್ಮ ಗಂಡೂ ಅಲ್ಲ, ಹೆಣ್ಣೂ ಅಲ್ಲ, ಆತ್ಮಜ್ಞಾನಕ್ಕೆ ಲಿಂಗಭೇದವಿಲ್ಲ ಎಂದು ಗೊಗ್ಗವ್ವೆ ಸಾರಿದ್ದಾಳೆ.

*****

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಗೊ.ರು.ಚನ್ನಬಸಪ್ಪನವರಿಗೊಂದು ಪತ್ರ

ಮಾನ್ಯ ಗೊ.ರು.ಚನ್ನಬಸಪ್ಪನವರು
ಮಾಜಿ ಅಧ್ಯಕ್ಷರು,
ಅ.ಭಾ.ಶ.ಸಾ.ಪ
ಮೈಸೂರು

ಇವರಿಗೆ ಜಿ.ಬಿ.ನಾಗಭೂಷಣ ಮಾಡುವ ಶರಣು ಶರಣಾರ್ಥಿಗಳು.

ಜಿ.ಬಿ.ನಾಗಭೂಷಣನಾದ ನಾನು ತುಮಕೂರಿನಲ್ಲಿ ವಾಸವಿದ್ದು, ಅ.ಭಾ.ಶ.ಸಾ.ಪರಿಷತ್ತಿನ ಸದಸ್ಯನಾಗಿದ್ದೇನೆ. ಇತ್ತೀಚಿನ ಪ್ರಚಲಿತ ವಿದ್ಯಮಾನವಾದ "ಲಿಂಗಾಯತ ಧರ್ಮ" ಸ್ವತಂತ್ರ ಧರ್ಮದ ಮಾನ್ಯತೆ ಬಗ್ಗೆ ಆಗುತ್ತಿರುವ ಜನರ ಜಾಗೃತಿಯಿಂದಾಗಿ ಅಲ್ಲಲ್ಲೇ ನಡೆಯುತ್ತಿರುವ ಲಿಂಗಾಯತ ಧರ್ಮ ಸಮಾವೇಶದಲ್ಲಿ ಲಕ್ಷಾಂತರ ಜನರು ಭಾಗವಹಿಸಿ, ಒಂದು ಅಭೂತಪೂರ್ವ ಜಾಗೃತಿಯನ್ನು ಧರ್ಮದ ಬಗ್ಗೆ ಮೂಡಿಸುತ್ತಿದ್ದಾರೆ. ಬೀದರ್, ಲಾಥೂರ್, ಚಿತ್ರದುರ್ಗ ಮುಂತಾದೆಡೆ ನಡೆದಂತೆ ನಮ್ಮ ಜಿಲ್ಲೆ ತುಮಕೂರಿನಲ್ಲೂ ಲಿಂಗಾಯತ ಧರ್ಮ ಸಮಾವೇಶ ನಡೆಸಲು ಸಮಾನ ಮನಸ್ಕರು ಸೇರಿ ಕಾರ್ಯ ಪ್ರವೃತ್ತರಾಗಲು ಯೋಚಿಸುತ್ತಿರುವ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಅ.ಭಾ.ಶ.ಸಾ.ಪ ಅಧ್ಯಕ್ಷರಾದ ಎಂ.ಜಿ.ಸಿದ್ಧರಾಮಯ್ಯನವರನ್ನು ಏರ್ಪಡಿಸೋಣವೆಂದು ಕೇಳಿದೆ. ಅದಕ್ಕೆ ಅವರು ಕೊಟ್ಟ ಉತ್ತರ ಬಹಳ ಮಾರ್ಮಿಕವಾಗಿತ್ತು. ಏನೆಂದರೆ ನಮ್ಮ ಅ.ಭಾ.ಶ.ಸಾ.ಪ ಮಾಜಿ ಹಾಗೂ ಹಾಲಿ ಅಧ್ಯಕ್ಷರು ಹೇಳಿರುವಂತೆ, ನಾವು ಯಾರ ಪರವೂ, ಯಾರ ವಿರೋಧವೂ ಇಲ್ಲ. ಯಾವುದರಲ್ಲೂ ಭಾಗವಹಿಸುವುದಿಲ್ಲ. ನಮ್ಮದ್ದೇನಿದ್ದರೂ ಶರಣ ಸಾಹಿತ್ಯ ಪರಿಷತ್ತು. ಇದರಲ್ಲಿ ಎಲ್ಲಾ ಜನಾಂಗದವರು ಇದ್ದಾರೆ, ನಾವೂ ಬರುವುದಿಲ್ಲ ಎಂದರು. ಇದು ನನಗೆ ಒಂದು ರೀತಿ ದಿಗ್ಭ್ರಮೆಯಾಯಿತು. ಎಂ.ಜಿ.ಎಸ್ ರವರು ಲಿಂಗಾಯತರಲ್ಲವೇ? ಲಿಂಗಧಾರಿಗಳಲ್ಲವೆ..? ನಾನವರನ್ನು ಕೇಳಿದೆ. ಶರಣ ಸಾಹಿತ್ಯವೆಂದರೆ ಯಾವುದು? ಅದು ಯಾವ ಯಾರ ಶರಣ ಸಾಹಿತ್ಯ? ಶರಣರೆಂದರೆ ಯಾರು? ಅವರ ಸಾಹಿತ್ಯ ಗ್ರಂಥಗಳು ಯಾವುವು? ಬಸವಾದಿ ಶರಣರು ಕೊಟ್ಟ ಶರಣ ಸಾಹಿತ್ಯವೋ ಅಥವಾ ಇನ್ಯಾವುದೇ ಬೇರೆ ಶರಣ ಸಾಹಿತ್ಯ ಇದೆಯೋ; ಬಸವಾದಿ ಶರಣರ ಸಾಹಿತ್ಯವಾದರೆ ಅವರು ಹೇಳಿರುವುದೇನು? ಅವರ ವಚನ ಸಾಹಿತ್ಯದಲ್ಲಿ ಏನಿದೆ? ಅವರು ಲಿಂಗಧಾರಿಗಳಲ್ಲವೇ? ಆ 770 ಜನ ಶರಣರಲ್ಲಿಯೂ ಕೂಡ ಬೇರೆ ಬೇರೆ ಜಾತಿ

ಮತ ಪಂಥ ಕಸುಬಿನವರು ಸೇರಿರಲಿಲ್ಲವೇ? ಅವರೆಲ್ಲರೂ ಬಸವಣ್ಣನವರು ಕೊಟ್ಟ ಇಷ್ಟಲಿಂಗವನ್ನು ಧರಿಸಿ ಲಿಂಗಾಯತರಾಗಿಲ್ಲವೇ? ಹಾಗಾದರೆ ನೀವೂ ಇಲ್ಲಿ ಮಾಡುತ್ತಿರುವ ಸಭೆ ಸಮಾರಂಭ ಯಾವುದಕ್ಕೋಸ್ಕರ? ಅಲಿ ಏನನ್ನು ಬಿತ್ತರಿಸುತ್ತೀರಿ, ಬರೀ ದತ್ತಿ ಉಪನ್ಯಾಸ, ಯಾವ ಶರಣರ ಬಗ್ಗೆ ಅವರ ನಡೆ ನುಡಿ ಬಗ್ಗೆ, ಅವರ ವಚನ ಸಾರಗಳ ಬಗ್ಗೆ, ಜನರಲ್ಗಲಿ ಅರಿವು ಮೂಡಿಸಿದ್ದೀರಾ? ನಿಮ್ಮ ಶರಣ ಸಾಹಿತ್ಯ ಪರಿಷತ್ತಿನ ಧ್ಯೇಯೋದ್ದೇಶಗಳೇನು? ನೀವ್ಯಾರು ಶರಣರ ಅನುಯಾಯಿಗಳಲ್ಲವೆ? ನೀವ್ಯಾರು ಲಿಂಗಾಯತರಲ್ಲವೇ? ಲಿಂಗಾಯತರಾಗಿದ್ದರೆ, ಲಿಂಗಾಯತ ಧರ್ಮದ ಸಮಾವೇಶದಲ್ಲಿ ಭಾಗವಹಿಸುವುದಿಲ್ಲವೇಕೆ? ನಿಮ್ಮಂತಹ ತಿಳಿದವರು, ಜ್ಞಾನಿಗಳೂ, ವಚನಾಧ್ಯಯನ ಶೀಲರು, ವಾಗ್ಮಿಗಳು, ಗಣ್ಯ ವ್ಯಕ್ತಿಗಳು ಭಾಗವಹಿಸಬಹುದಿತ್ತಲ್ಲವೆ. ಭಾಗವಹಿಸಿದರೆ ಏನಾಗುತ್ತದೆ. ಭಯವೇ, ನಿಮ್ಮದೆಲ್ಲವೂ ದತ್ತಿಯ ಮೂಲಕ ಹಣ ಸಂಗ್ರಹಿಸಿ ಸಭೆ ಸಮಾರಂಭ ಹಾರ ತುರಾಯಿ ಪ್ರಚಾರ ಫೋಟೋ ಇತ್ಯಾದಿಯಲ್ಲಿ ತಲ್ಲೀನವೇ? ನೀವುಗಳು ಏಕೆ ಸ್ವಯಂ ಆಗಿ ಧರ್ಮ ಸಮಾವೇಶಗಳಲ್ಲಿ ಭಾಗವಹಿಸುತ್ತಿಲ್ಲ. ಪತ್ರಿಕೆಗಳಲ್ಲಿ ತಮ್ಮ ಅನಿಸಿಕೆ ಬರೆಯುತ್ತಿಲ್ಲ. ಸ್ವತಂತ್ರ ಧರ್ಮದ ಮಾನ್ಯತೆ ಬಗ್ಗೆ ನಿಮ್ಮ ಬೆಂಬಲವೇಕಿಲ್ಲ. ಇಲ್ಲದಿದ್ದರೆ ಶರಣ ಸಾಹಿತ್ಯ ಪರಿಷತ್ತಿನ ಅರ್ಥ, ಅದರ ನಿಲುವು ಯಾಕಾಗಿ, ಯಾರಿಗೋಸ್ಕರ, ಯಾವ ಉದ್ದೇಶಕ್ಕೋಸರ? ಪರಿಷತ್ತು ನಡೆಸುತ್ತಿದ್ದೀರಿ, ಶರಣ ಸಾಹಿತ್ಯದ ಸತ್ಯಾಸತ್ಯತೆ ಏನು? ಇಲ್ಲಿ ಶರಣರು ವೀರಶೈವವನ್ನು ಹೇಳಿದ್ದಾರೆಯೇ? ವೀರಶೈವರಂತೆ ಇತೆ ಜಾತಿ ಜನಾಂಗದವರು ಲಿಂಗಧಾರಿಗಳಾಗಿಲ್ಲವೇ, ಯಾಕಾದರೂ ಈ ರೀತಿ ಶರಣ ಸಾಹಿತ್ಯ ಪದಾಧಿಕಾರಿಗಳಿಗೆ ಭಾಗವಹಿಸದಂತೆ ತಟಸ್ಥರಾಗಿರುವಂತೆ ಹೇಳಿದ್ದೀರಿ, ಎಂಗಡಿಸಿದ್ದೀರಾ? ಹೆದರಿಸಿದ್ದೀರಾ? ಅವರಿಗೆ ಸ್ವತಂತ್ರವಿಲ್ಲವೇ? ಈ ರೀತಿ ಆದರೆ ನಾವೆಲ್ಲ ಯಾಕಾದರೂ ಸದಸ್ಯರಾದೆವು. ಬರೆಯುತ್ತಾ ಹೋದರೆ ಮುಗಿಯುವುದಿಲ್ಲ. ಯಾರನ್ನು ನೋಯಿಸುವುದಾಗಲಿ ನಮ್ಮ ಭಾವನೆಯಲ್ಲ, ಸಂದರ್ಭಾನುಸಾರ ತಿಳಿಸಿದ್ದೇನೆ. ತಿಳಿದವರಿಗೆ ಹೆಚ್ಚಿಗೆ ಬರೆಯಲು ಶಕ್ತನಲ್ಲ, ದಯಮಾಡಿ ಇದಕ್ಕೆ ಪತ್ರಿಕೆಯಾಗಲಿ, ನನಗಾಗಲಿ ದಯಮಾಡಿ ಉತ್ತರಿಸಬೇಕಾಗಿ ತಮ್ಮಲ್ಲಿ ಕಳಕಳಿಯ ಪ್ರಾರ್ಥನೆ.

ಶರಣು ಶರಣಾರ್ಥಿಗಳೊಡನೆ
ಜಿ.ಬಿ.ನಾಗಭೂಷಣ
'ಶ್ರೀ ನಾಗೇಶ್ವರ ನಿಲಯ'
ಗೋಕುಲ ಮುಖ್ಯರಸ್ತೆ,
ಸೋಮೇಶ್ವರಪುರ
ತುಮಕೂರು

ಜಿ.ಬಿ.ನಾಗಭೂಷಣರವರ ಪತ್ರಕ್ಕೆ
ಗೊ.ರು.ಚನ್ನಬಸಪ್ಪ ಅವರ ಪ್ರತಿಕ್ರಿಯೆ

ಶ್ರೀ.ಜಿ.ಬಿ.ನಾಗಭೂಷಣ
ಅವರಲ್ಲಿ ಪ್ರಣಾಮಗಳು

ಆತ್ಮೀಯರೆ,

ದಿ: 22-10-2017ರ ನಿಮ್ಮ ಪತ್ರ ಇಂದು ನನ್ನ ಕೈ ಸೇರಿತು. ನಿಮ್ಮ ಕಳಕಳಿ ಅರ್ಥವಾಗುತ್ತದೆ.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಒಂದು ಪ್ರಾತಿನಿಧಿಕ ಸಂಸ್ಥೆಯಾಗಿದ್ದು, ಸಾಕಷ್ಟು ವಿಚಾರ ಮಾಡಿ ತನ್ನ ನಿಲುವನ್ನು ಪ್ರಕಟಿಸಬೇಕಾಗುತ್ತದೆ. ಹಾಗಾಗಿ ತುಮಕೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಕೇಂದ್ರ ಪರಿಷತ್ತಿನ ಸೂಚನೆಗಾಗಿ ಕಾದಿರಬಹುದು. ಅವರ ಬಗೆಗೆ ತಪ್ಪು ತಿಳಿಯಬೇಡಿ.

ಇನ್ನೂ ಈಗ ನಡೆದಿರುವ ವಾದ- ವಿವಾದಗಳ ಬಗೆಗೆ ಶರಣ ಸಾಹಿತ್ಯ ಪರಿಷತ್ತಿನ ವೃದ್ಧಾಪ್ಯದಿಂದಾಗಿ ಕ್ರಿಯಾಶೀಲನಾಗಿಲ್ಲದಿರುವುದು ನಿಮಗೂ ತಿಳಿದಿದೆ. ಆದರೂ ನನ್ನ ವಿಚಾರಗಳನ್ನು ಮಾಧ್ಯಮಗಳಿಗೆ ಕಳುಹಿಸಿದ್ದೇನೆ. ಇತ್ತೀಚಿನ ನನ್ನ ಹೇಳಿಕೆಯ ಪ್ರತಿಯನ್ನು ನಿಮ್ಮ ಗಮನಕ್ಕಾಗಿ ಕಳುಹಿಸಿದ್ದೇನೆ.

ಇನ್ನು ಶರಣ ಸಾಹಿತ್ಯ ಪರಿಷತ್ತಿನ ಸದಸ್ಯರಾಗಲೀ, ಪದಾಧಿಕಾರಿಗಳಾಗಲೀ ತಮ್ಮ ವೈಯಕ್ತಿಕ ಅಭಿಪ್ರಾಯ ನೀಡಲು ಯಾವುದೇ ನಿರ್ಬಂಧವಿದೆ ಎಂದು ನಾನು ತಿಳಿದಿಲ್ಲ.

ಒಟ್ಟಾರೆ ಪರಿಷತ್ತು ನಿಮ್ಮ ನಿಲುವಿಗೆ ಪರವಾಗಿಯೇ ಇದೆ ಎಂದು ನಾನು ತಿಳಿದಿದ್ದೇನೆ.

ಇಂತಿ ಪ್ರಣಾಮಗಳು
ಗೊ.ರು.ಚನ್ನಬಸಪ್ಪ

ಜಿ.ಬಿ.ನಾಗಭೂಷಣ
'ಶ್ರೀ ನಾಗೇಶ್ವರ ನಿಲಯ'
ಗೋಕುಲ ಮುಖ್ಯರಸ್ತೆ,
ಸೋಮೇಶ್ವರಪುರ
ತುಮಕೂರು

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ
2018 ರ ಜನವರಿ 11, 12, 13, 14, 15ರಂದು ನಡೆಯಲಿರುವ
31ನೆಯ ಶರಣಮೇಳದ ಅಂಗವಾಗಿ
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ
ಪ್ರಚಾರ ಪ್ರವಾಸ ಕಾರ್ಯಕ್ರಮ

ಆತ್ಮೀಯ ಶರಣ ಬಂಧುಗಳಿಗೆ, ಬಸವ ಸ್ಮರಣಪೂರ್ವಕ ಶುಭ ಹಾರೈಕೆಗಳು.

ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶರಣ ಬಂಧುಗಳ ಹಿಗ್ಗಿನ ಉತ್ಸವ, 2018ನೆಯ ಇಸವಿಯ ದಿ.11ರಿಂದ 15ರವರೆಗೆ ನಡೆಯುವ 31ನೆಯ ಶರಣ ಮೇಳದ ಪ್ರಚಾರಾರ್ಥ ಮತ್ತು ಸಂಘಟನೆ, ಸಂದರ್ಶನದ ದೃಷ್ಟಿಯಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗ ತಮ್ಮ ಊರಿಗೆ ಅವರು ಆಗಮಿಸುವ ದಿನಾಂಕದ ವೇಳಾ ಪಟ್ಟಿಯನ್ನು ಕಳಿಸಲಾಗಿದೆ. ಈ ದಿನಾಂಕಕ್ಕೆ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ ತಮ್ಮ ಸಾಧ್ಯಾ ಸಾಧ್ಯತೆಯನ್ನು ಬೇಗನೆ ನಮಗೆ ದೂರವಾಣಿಯ ಮೂಲಕ ಅಥವಾ ಪತ್ರ ಮುಖೇನ ತಿಳಿಸಬೇಕು. ಬೆಂಗಳೂರು ವಿಳಾಸಕ್ಕೆ ವ್ಯವಹರಿಸಬೇಕು. ಕಾರಣಾಂತರದಿಂದ ನಿಮಗೆ ಕಾರ್ಯಕ್ರಮ ಏರ್ಪಡಿಸಲು ಆಗದೆ ಇದ್ದರೆ ಅಥವಾ ಇನ್ನೂ ಹೆಚ್ಚುವರಿ ದಿನಾಂಕಗಳು ಬೇಕಾಗಿದ್ದರೆ ತಕ್ಷಣ ತಿಳಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದರ್ಶಿಸಲಿರುವ ಈ ಸಮಯವನ್ನು ಸಂಘಟನೆಗಾಗಿ ಬಳಸಿಕೊಳ್ಳುವುದೇ ಅಲ್ಲದೆ ದೀಕ್ಷಾ ಕಾರ್ಯಕ್ರಮಗಳನ್ನು ಏರ್ಪಡಿಸಲೂಬಹುದು. 2018ನೆಯ ಇಸವಿಯ 31ನೆಯ ಶರಣ ಮೇಳದ ಸರ್ವತೋಮುಖ ಯಶಸ್ಸಿಗೆ ತಾವು ಸಹಕರಿಸುವಿರಾಗಿ ನಂಬಿದ್ದೇವೆ.

ವಾಸ್ತವ್ಯ : ಬೆಂಗಳೂರು
03-09-2017

ಪೂಜ್ಯ ಶ್ರೀಮನ್ ನಿರಂಜನ
ಮಹಾ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ

ವಿ.ಸೂ: ಕಾರಣಾಂತರದಿಂದ ದಿನಾಂಕಗಳಲ್ಲಿ ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.ಸ್ಥಳೀಯ ಕಾರಣದಿಂದ ಬದಲಾವಣೆ ಬೇಕಾಗಿದರೆ ತಕ್ಷಣವೇ ತಿಳಿಸಿರಿ.

ಸಂಪರ್ಕಿಸುವ ದೂರವಾಣಿ:

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ - 9611698230
ಪೂಜ್ಯ ಶ್ರೀ ಸದ್ಗುರು ಮಾತೆ ಬಸವರತ್ನಾದೇವಿ -9481741795

ಕ್ರ.ಸಂ.	ವಾರ	ದಿನಾಂಕ	ಊರಿನ ಹೆಸರು
42.	ಮಂಗಳ(ಬಸವ)ವಾರ	12-12-2017	ಗೋಕಾಕ್

43.	ಬುಧ(ಚನ್ನ)ವಾರ	13-12-2017	ಗೋಕಾಕ್
44.	ಗುರು(ಪ್ರಭು)ವಾರ	14-12-2017	ಗೋಕಾಕ್
45.	ಶುಕ್ರ(ಮಾತೃ)ವಾರ	15-12-2017	ಗೋಕಾಕ್
46.	ಶನಿ(ಶರಣ)ವಾರ	16-12-2017	ಶೇಗುಣಸಿ
47.	ಭಾನು(ದೇವ)ವಾರ	17-12-2017	ಖವಟಕೊಪ್ಪ
48.	ಸೋಮ(ಶಿವ)ವಾರ	18-12-2017	ತಾಂವಶಿ
49.	ಮಂಗಳ(ಬಸವ)ವಾರ	19-12-2017	ಅಥಣಿ
50.	ಬುಧ(ಚನ್ನ)ವಾರ	20-12-2017	ಕನಮಡಿ
51.	ಗುರು(ಪ್ರಭು)ವಾರ	21-12-2017	ಚಡಚಣ
52.	ಶುಕ್ರ(ಮಾತೃ)ವಾರ	22-12-2017	ವಿಜಯಪುರ
53.	ಶನಿ(ಶರಣ)ವಾರ	23-12-2017	ಸಿಂಧಗಿ
54.	ಭಾನು(ದೇವ)ವಾರ	24-12-2017	ಗುಲಬರ್ಗಾ
			ಮಹಾಂತೇಶನಗರ- 10.30ಕ್ಕೆ
			ನೃಪತುಂಗನಗರ - ಸಂಜೆ 6ಕ್ಕೆ
55.	ಸೋಮ(ಶಿವ)ವಾರ	25-12-2017	ಯಲಮಾಮಿಡಿ
56.	ಮಂಗಳ(ಬಸವ)ವಾರ	26-12-2017	ಉದಗೀರ್
57.	ಬುಧ(ಚನ್ನ)ವಾರ	27-12-2017	ಕಮಲನಗರ
58.	ಗುರು(ಪ್ರಭು)ವಾರ	28-12-2017	ಮುಧೋಳ- ಸಂಜೆ 4ಕ್ಕೆ
			ಔರಾದ್ - ಸಂಜೆ 6ಕ್ಕೆ
59.	ಶುಕ್ರ(ಮಾತೃ)ವಾರ	29-12-2017	ಬೀದರ್
60.	ಶನಿ(ಶರಣ)ವಾರ	30-12-2017	ಜಹೀರಾಬಾದ್
61.	ಭಾನು(ದೇವ)ವಾರ	31-12-2017	ಜಹೀರಾಬಾದ್
62.	ಸೋಮ(ಶಿವ)ವಾರ	01-01-2018	ಹೈದ್ರಾಬಾದ್
63.	ಮಂಗಳ(ಬಸವ)ವಾರ	02-01-2018	ಹೈದ್ರಾಬಾದ್
64.	ಬುಧ(ಚನ್ನ)ವಾರ	03-01-2018	ಹೈದ್ರಾಬಾದ್
65.	ಗುರು(ಪ್ರಭು)ವಾರ	04-01-2018	ಹೈದ್ರಾಬಾದ್
66	ಶುಕ್ರ(ಮಾತೃ)ವಾರ	05-01-2018	ಹೈದ್ರಾಬಾದ್
67.	ಶನಿ(ಶರಣ)ವಾರ	06-01-2018	ಹೈದ್ರಾಬಾದ್
68.	ಭಾನು(ದೇವ)ವಾರ	07-01-2018	ಹೈದ್ರಾಬಾದ್
69.	ಸೋಮ(ಶಿವ)ವಾರ	08-01-2018	ಹೈದ್ರಾಬಾದ್
70.	ಮಂಗಳ(ಬಸವ)ವಾರ	09-01-2018	ಹೈದ್ರಾಬಾದ್
71.	ಬುಧ(ಚನ್ನ)ವಾರ	10-01-2018	ಕೂಡಲ ಸಂಗಮಕ್ಕೆ ಪ್ರಯಾಣ

ಡಾ.ಎಂ.ಚಿದಾನಂದಮೂರ್ತಿಯವರ ವಿತಂಡವಾದ

- ಸು.ಮಲ್ಲಿಕಾರ್ಜುನಪ್ಪ,
ಚಾಮರಾಜನಗರ ಜಿಲ್ಲೆ

ವೀರಶೈವ ಅಥವಾ ಲಿಂಗಾಯತರು ನೂರಕ್ಕೆ ನೂರರಷ್ಟು ಹಿಂದುಗಳು ಎಂದು ಡಾ.ಎಂ.ಚಿದಾನಂದಮೂರ್ತಿ ಹೇಳಿದ್ದಾರೆ (ಪತ್ರಿಕೆಗಳು ೨೭-೬-೨೦೧೭).

ವೀರಶೈವರು ಹಿಂದುಗಳೆಂಬುದೇನೋ ನಿಜ. ಆದರೆ ಲಿಂಗಾಯತರನ್ನೂ ಹಿಂದುಗಳೆಂದಿರುವುದು ಸುಳ್ಳು. ವೇದಗಳಿಗೆ ವಿರುದ್ಧವಾಗಿಯೇ ಹುಟ್ಟಿರುವ ಲಿಂಗಾಯತವು ಸಂಪೂರ್ಣವಾಗಿ ಅಹಿಂದು ಅವೈದಿಕವಾದ ಬಸವ ಪ್ರಣೀತ ಪರಿಪೂರ್ಣ ಸ್ವತಂತ್ರಧರ್ಮ.

ಡಾ.ಎಂ.ಚಿದಾನಂದಮೂರ್ತಿಯವರು ವಿನಾಕಾರಣವಾಗಿ ದುರುದ್ದೇಶದಿಂದ ದಿಕ್ಕು ತಪ್ಪಿಸುವ ಸಲುವಾಗಿ ಇಂತಹ ಹೇಳಿಕೆಗಳನ್ನು ನೀಡುತ್ತಿರುವುದು ಎಲ್ಲರಿಗೂ ತಿಳಿದ ವಿಚಾರ. ಲಿಂಗಾಯತರಿಗೆ ಸರ್ಕಾರ ಕೊಡಮಾಡುವ ಸ್ವತಂತ್ರಧರ್ಮದ ಮಾನ್ಯತೆ, ಜನಗಣತಿಯಲ್ಲಿ ಪ್ರತ್ತೇಕ ಸಂಕೇತ ಸಂಖ್ಯೆ, ಅಲ್ಪಸಂಖ್ಯಾತರ ಸ್ಥಾನಮಾನ ಸೌಲಭ್ಯಗಳನ್ನು ತಪ್ಪಿಸಲೆತ್ನಿಸುತ್ತಿರುವುದು ಸಮಾಜಕ್ಕೆ ಬಗೆದ ದ್ರೋಹ.

ಹಿಂದೂಗಳೆಂದರೆ ಯಾರೆಂಬ ಬಗ್ಗೆ ಮೊದಲು ಅವರು ಖಚಿತ ನಿಲುವಿಗೆ ಬರಬೇಕು. ಸಾಮಾನ್ಯವಾಗಿ ವೈದಿಕವರ್ಣಾಶ್ರಮ ಧರ್ಮವನ್ನು ಅನುಸರಿಸುವವರಿಗೆ ಹಿಂದೂಗಳೆಂದು ಕರೆಯಲಾಗುತ್ತಿದೆ. ಆದರೆ ಚಿದಾನಂದಮೂರ್ತಿ ವೀರಶೈವರನ್ನು ಹಿಂದೂಗಳೆಂದು ಪ್ರತಿಪಾದಿಸುತ್ತಿರುವುದರಿಂದ ಅವರು ವೈದಿಕ ವರ್ಣಾಶ್ರಮಧರ್ಮಕ್ಕೆ ಸೇರಿದವರೆಂದಾಯಿತು. ಅದರಿಂದ ಚಿದಾನಂದಮೂರ್ತಿಯವರು ಈ ವರ್ಣಾಶ್ರಮ ಧರ್ಮಗಳಲ್ಲಿ ಯಾವ ವರ್ಣಕ್ಕೆ ಸೇರಿದವರು?. ವೀರಶೈವರಲ್ಲಿ ಬ್ರಾಹ್ಮಣ,ಕ್ಷತ್ರಿಯ, ವೈಶ್ಯ ಹಾಗೂ ಶೂದ್ರರು ಯಾರು? ಎಂಬುದನ್ನು ಸ್ಪಷ್ಟಪಡಿಸಿ, ಇಂತಹ ಹೇಳಿಕೆ ನೀಡಿರುವ ತಪ್ಪಿಗೆ ಕ್ಷಮೆ ಕೇಳಿ, ಮುಂದೆ ಈ ರೀತಿ ಹೇಳಿಕೆ ಕೊಡುವುದಿಲ್ಲ ಎಂದು ಭರವಸೆ ನೀಡಿ ಎಂದು ಒತ್ತಾಯಿಸುತ್ತೇವೆ.

ಪಾವನ ವಾದೆನು ಬಸವಣ್ಣಾ, ನಿಮ್ಮ ಪಾವನ ಮೂರ್ತಿಯ ಕಂಡು
ಪರತತ್ವವನೈದಿದೆ ಬಸವಣ್ಣಾನಿಮ್ಮ ಪರಮ ಸೀಮೆ ಕಂಡು
ಪದನಾಲ್ಕ ಮೀರಿದೆ ಬಸವಣ್ಣಾ ನಿಮ್ಮ ಪರುಷ ಪಾದವ ಕಂಡು.
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಕೂಡಿದೆ;
ಬಸವಣ್ಣಾ, ಬಸವಣ್ಣಾ, ಬಸವಣ್ಣಾ
ನೀನು ಗುರುವಾದೆಯಾಗಿ.

ಲಿಂಗಾಯತ ಧರ್ಮದವರೆಂದು ನಂಬಿದ ಕಾರಣ:

1. ಬಸವ ಗುರುವಿನ ಸಂತಾನಿ ಎಂದೆನಿಸಿತ್ತು
2. ವಿಶ್ವಧರ್ಮೀಯರೆಂದರೆಸಿತ್ತು, ವಿಶ್ವಕುಟುಂಬಿ ಎಂದೆನಿಸಿತ್ತು
3. ಇಷ್ಟಲಿಂಗ ನಿಷ್ಠೆ ಗಟ್ಟಿಗೊಂಡಿತ್ತು
4. ಏಕದೇವೋಪಾಸನೆಗೆ ಕಾರಣವಾಯಿತ್ತು.
5. ಲಿಂಗಪತಿಗೆ ಶರಣಸತಿಯನ್ನಾಗಿಸಿತ್ತು.
6. ವಚನ ಸಾಹಿತ್ಯ ಧರ್ಮಸಂಹಿತೆಯಾಯಿತ್ತು.
7. ಜಾತ್ಯಾತೀತ ಸಮಾಜವು ಧರ್ಮದ ಧ್ಯೇಯವಾಗಿದ್ದಿತ್ತು.
8. ಇವನಮ್ಮವ ಇವನಮ್ಮವರೆಂಬುದ ಕಲಿಸಿತ್ತು
9. ಪೂಜಾರಿ ಶೋಷಣೆಯಿಂದ ಪಾರುಮಾಡಿತ್ತು
10. ಅಜ್ಞಾನದಿಂದ ಸುಜ್ಞಾನದತ್ತ ಕರೆದೊಯ್ದಿತ್ತು.
11. ಜಡದಿಂದ ಚೇತನ ಹುಟ್ಟಲಾರದೆಂದಿತ್ತು.
12. ಅರ್ಹರು ಗುರು, ಜಂಗಮರಾಗಬಹುದೆಂದೆನಿಸಿತ್ತು
13. ಗುರು ಜಂಗಮರೂ ಕಾಯಕ ಮಾಡಬೇಕೆಂದಿತ್ತು
14. ದೀನದಲಿತರನ್ನು ಶೋಷಣೆಯಿಂದ ಮುಕ್ತರಾಗಿಸಿತ್ತು
15. ಹೋಮ ಹವನಗಳನ್ನು ನಿಶೇದಿಸಿತ್ತು
16. ವೈಚಾರಿಕತೆಗೆ ಒತ್ತುಕೊಟ್ಟಿತ್ತು
17. ಸಕಲ ಜೀವಿಗಳಿಗೆ ಲೇಸ ಬಯಸಿ, ಪ್ರಾಣಿ ಬಲಿ ನಿಷೇದಿಸಿತ್ತು
18. ಜಾತಿಗಳನ್ನು ಧರ್ಮದೆಡೆಗೆ ಕರೆದೊಯ್ದಿತ್ತು
19. ಲಿಂಗಾಯತವು ಸ್ವತಂತ್ರ ಧರ್ಮವೆಂದೆನಿಸಿತ್ತು
20. ಭಕ್ತರಲ್ಲಿ ಸರ್ವಸಮಾನತೆಯ ಭಾವ ಮೂಡಿಸಿತ್ತು
21. ಇಷ್ಟಲಿಂಗವಿಡಿದು ಸೃಷ್ಟಿಕರ್ತನ ಸ್ತುತಿಯಮಾಡಿಸಿತ್ತು
22. ಬದುಕಿದಾಗಲೇ ಲಿಂಗೈಕ್ಯರಾಗುವುದ ಕಲಿಸಿತ್ತು
23. ಶೋಷಣೆಗೆ ರಹಿತ ಸಮಾಜ ನಿರ್ಮಾಣವಾಗಿತ್ತು
24. ದೇಹವನ್ನೆ ದೇಗುಲವನ್ನಾಗಿಸಿತ್ತು
25. ಸದಾಚಾರದ ಬದುಕ ಕಲಿಸಿತ್ತು
26. ಮೃತರಾದವರನ್ನು ಲಿಂಗೈಕ್ಯರಾದರೆನ್ನುವರು
27. ಭವಪಾಶ ಹರಿಯಲು ಬಸವಧರ್ಮವು ಕಲಿಸಿತ್ತು

ಹೇಳುತ್ತಾ ಹೋದರೆ ಹೇಳುವುದು ಬಹಳುಂಟು. ಇದುಕಾರಣ, ಅಂಗದಮೇಲೆ ಲಿಂಗವಿದ್ದವರು ಬಸವಗುರು ಪ್ರಣೀತ ಲಿಂಗಾಯತ ಧರ್ಮದವರೆಂದು ವಿಶ್ವಮಾನವರು ನಾವೆಂದು ಅರಿದವರ ಬಾಳು ಹಸನಾಗುವುದು. ಬಸವಕಂದಳಪ್ರಿಯ ಸರ್ವೇಶನೊಲುಮೆ ದೊರಕುವುದೆಂದು ಹೇಳುತ್ತಿಹಳು.

"ಬಸವ ಕಂದ"

ಸರೋಜಮ್ಮ ನಾಗರಾಜು, ಮೈಸೂರು





ಲಿಂಗಾಯತ ಧರ್ಮ ಮಹಾಸಭಾದ 22ನೇಯ ವಾರ್ಷಿಕೋತ್ಸವದ ಸಮಾವೇಶ



December Sanchike Published on 08-12-2017
Name of the Printer - Sumuka Printers, Bengalure-560010
Registered with Registrar of News Papers in India, New Delhi No.19988/70
Postal Registration (SSP os BG-West Dn)No.KA/BGW-50/wpp-17/2015-17,
Licenced to Post the Printed Magazine without Prepayment (WPP-17).
Posted at Bengalure PSO, Mysuru Road, (Bg-560026) on 3rd, 10th,
20th of every month, Pages 32+4